ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಹಲಗಲಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಡಾ. ವಿಜಯಶ್ರೀ ಇಟ್ಟಣ್ಣವರ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**HALAGALI:** An Introducing Book on the Places in Karnataka that Played a Major Role in the Freedom Struggle, Written by Dr. Vijayashri Ittannavar, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಝಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಡಾ. ಬಿ.ವಿ. ವಸಂತಕುಮಾರ್ ಅವರ ನೇತೃತ್ವದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪಿನಲ್ಲಿ ಕರ್ನಾಟಕದ ೭೫ ಸ್ವಾತಂತ್ರ್ಯ ಸಂಗ್ರಾಮದ ಶಕ್ತಿ ಕೇಂದ್ರಗಳನ್ನು ನೆನಪಿಸಿಕೊಳ್ಳುವ ಬೃಹತ್ ಕಾರ್ಯ ಯೋಜನೆ ಹಾಕಿಕೊಂಡಿದೆ. ಇದೊಂದು ರಚನಾತ್ಮಕ ಮತ್ತು ಮಾದರಿಯ ಕಾರ್ಯವಾಗಿದೆ.

ಗತಕಾಲದ ಸಂಸ್ಕೃತಿಯನ್ನು ವರ್ತಮಾನದಲ್ಲಿ ತಂದುಕೊಂಡು ಭವಿಷ್ಯಕ್ಕೆ ಕೊಡುವ ಇಂಥ ಯೋಜನೆ ಶ್ಲಾಘನೆಗೆ ಅರ್ಹವಾದುದು. ಭವಿಷ್ಯದ ತಲೆಮಾರುಗಳಿಗೆ ಈ ನೆಲದ ನಿಧಾನವನ್ನು ತಲುಪಿಸುವ ಇಂಥ ಕಾರ್ಯವನ್ನು ಆಗು ಮಾಡುತ್ತಿರುವ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್ ಅವರಿಗೆ ವಂದನೆಗಳು. ರಿಜಿಸ್ಟ್ರಾರ್ ಕರಿಯಪ್ಪ ಮತ್ತು ಶ್ರೀ ಹರೀಶ್‌ರವರಿಗೆ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿಗೆ ಅಭಿನಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾಗಿರುವ ಡಾ. ಪ್ರಕಾಶ ಗ. ಖಾಡೆಯವರು ಇಂಥ ಯೋಜನೆಯ ಭಾಗವಾಗುವ ಸದಾವಕಾಶವನ್ನು ನನಗೆ ನೀಡಿರುವುದಕ್ಕಾಗಿ ಅವರಿಗೆ ಹೃದಯಪೂರ್ವಕ ಧನ್ಯವಾದಗಳು.

ಹಲಗಲಿಯ ಕುರಿತಾಗಿ ಬರೆಯುವ, ಮಾಹಿತಿ ಕಲೆ ಹಾಕುವ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಅಪ್ಪ ಡಾ. ಶ್ರೀರಾಮ ಇಟ್ಟಣ್ಣವರ, ಅಮ್ಮ ಸರೋಜ ಇಟ್ಟಣ್ಣವರ ಇಬ್ಬರನ್ನೂ ಈ ಸಂದರ್ಭದಲ್ಲಿ ನೆನೆಯದೇ ಇರಲಾರೆ. ಅಂದವಾಗಿ ಪುಟ ವಿನ್ಯಾಸಗೊಳಿಸಿದ ಶ್ರೀ ಸಿದ್ದಲಿಂಗಪ್ಪನವರಿಗೂ, ಈ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**– ಡಾ. ವಿಜಯಶ್ರೀ ಇಟ್ಟಣ್ಣವರ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ೧. ಪೀಠಿಕೆ | ೧೫ |
| ೨. ಹಲಗಲಿ | ೧೯ |
| ೩. ನಿಶಸ್ತ್ರೀಕರಣ ಕಾಯ್ದೆ | ೨೭ |
| ೪. ಹಲಗಲಿ ಬಂಡಾಯ | ೨೯ |
| ೫. ಹಲಗಲಿ ಬಂಡಾಯಗಾರರು | ೩೫ |
| ೬. ಶೂರರ ನೆಲೆವೀಡಾಗಿ ಹಲಗಲಿ | ೪೨ |
| ೭. ಸಮಾರೋಪ | ೪೬ |
| ಅನುಬಂಧ | ೪೮ |
| ೧. ಲಾವಣಿ | ೪೮ |
| ೨. ತ್ರಿಪದಿಗಳು | ೫೭ |
| ೩. ಆಕರ ಗ್ರಂಥಗಳು | ೬೪ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೬ |

# ೧. ಪೀಠಿಕೆ

ಭಾರತದಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟಗಳಲ್ಲಿ ೧೮೫೭ರ ಮೊದಲ ಸ್ವಾತಂತ್ರ್ಯ ಸಂಗ್ರಾಮ ಪ್ರಮುಖವಾದದ್ದು. ತಮ್ಮ ಅಧಿಕಾರವನ್ನು ವಿಸ್ತರಿಸುವ ಉದ್ದೇಶವನ್ನಿಟ್ಟುಕೊಂಡು ಭಾರತದಲ್ಲಿ ಬ್ರಿಟಿಷರು ಸಹಾಯಕ ಸೈನ್ಯ ಪದ್ಧತಿ, ದತ್ತು ಮಕ್ಕಳಿಗೆ ಹಕ್ಕಿಲ್ಲದಂಥ ಕಾನೂನುಗಳನ್ನು ಜಾರಿಗೊಳಿಸ ತೊಡಗಿದರು. ಈ ಕಾನೂನುಗಳಿಂದಾಗಿ ಹಲವು ಸಂಸ್ಥಾನಗಳು ಬ್ರಿಟಿಷರ ವಶವಾದವು. ಬ್ರಿಟಿಷರ ಕಾನೂನುಗಳು ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ಕ್ಷೇತ್ರಗಳ ಮೇಲೆ ಪ್ರಭಾವ ಬೀರಲು ಆರಂಭಿಸಿದವು. ದಿನದಿಂದ ದಿನಕ್ಕೆ ಭಾರತೀಯರ ಜನಜೀವನದ ಮೇಲೆ ಬ್ರಿಟಿಷರು, ಅವರ ನೀತಿಗಳು ಭಾರತೀಯರ ಮೇಲೆ ಆಕ್ರಮಣ ಮಾಡತೊಡಗಿದವು. ಇವು ಭಾರತೀಯರನ್ನು ಅಸಮಾಧಾನಗೊಳಿಸಿದವು.

ಬ್ರಿಟಿಷ್ ವಿರೋಧಿ ಅಲೆ ಭಾರತದಲ್ಲಿ ಜೋರಾಗಿ ಬೀಸಲಾರಂಭಿಸಿತು. ಆಗ ಭಾರತದಾದ್ಯಂತ ಬ್ರಿಟಿಷರ ವಿರುದ್ಧ ಜನ ಪ್ರತಿಭಟಿಸಲು ಆರಂಭಿಸುತ್ತಾರೆ. ಈ ಪ್ರತಿಭಟನೆಗಳನ್ನೆಲ್ಲ ಬ್ರಿಟಿಷರು ಕೇವಲ ದೊಂಬಿ, ದಂಗೆ, ಗೆರಿಲ್ಲಾ ಸಮರಗಳೆಂದು ಕರೆದು ಅಭಿಮಾನ ಶೂನ್ಯಗೊಳಿಸಿ ಚರಿತ್ರೆಯಲ್ಲಿ ದಾಖಲಿಸಿದರು. ಆದರೆ ಈ ಎಲ್ಲ ಹೋರಾಟಗಳು ಭಾರತೀಯರ ಆತ್ಮಾಭಿಮಾನಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ನಡೆದಂಥವುಗಳು.

೧೮೫೭ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಪರಿಗಣಿಸಿದರೂ ೧೭೬೯ ರಿಂದ ೧೮೫೬ರ ವರೆಗಿನ ಕಾಲದಲ್ಲಿ ಉತ್ತರ ಭಾರತದಲ್ಲಿ ೨೩, ಮುಂಬೈ ಮತ್ತು ಪಶ್ಚಿಮ ಭಾರತದಲ್ಲಿ ೨೩, ದಕ್ಷಿಣ ಭಾರತದಲ್ಲಿ ೧೯ ಹೋರಾಟಗಳು ನಡೆದವು. ಇವಿಷ್ಟೇ ಅಲ್ಲದೇ ಇದೇ ಕಾಲದಲ್ಲಿ ದಾಖಲೆಯಲ್ಲಿ ಪರಿಗಣನೆಗೆ ಒಳಪಡದ ನೂರಾರು ಬಂಡಾಯಗಳು ಈ ನೆಲದಲ್ಲಿ ನಡೆದು ಹೋಗಿವೆ ಎಂದು ಖ್ಯಾತ ಇತಿಹಾಸ ತಜ್ಞರಾದ ತಿ. ತಾ. ಶರ್ಮರವರು

ಅಭಿಪ್ರಾಯ ಪಡುವರು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸುರಪುರದ ವೆಂಕಟಪ್ಪ, ಸಂತಾಲರು, ಕೊಟ್ಟಾಯಂನ ಕೇರಳವರ್ಮ, ಉತ್ತರ ಆರ್ಕಾಟಿನ ಪಾಳೆಯಗಾರರು, ರಾಯಲ ಸೀಮೆಯ ಪಾಳೆಯಗಾರರು ಇವರೆಲ್ಲ ೧೮೫೭ ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಪೂರ್ವದಲ್ಲೇ ಬಿಳಿಯರ ವಿರುದ್ಧ ಬಂಡೆದ್ದವರು.

ಭಾರತೀಯರು ಬ್ರಿಟಿಷರ ವಿರುದ್ಧ ಬಂಡೇಳಲು ಅನೇಕ ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳು ಮುಖ್ಯವಾದವು ಅವುಗಳನ್ನು ಈ ಮುಂದಿನಂತೆ ನೋಡಬಹುದು.

**ರಾಜಕೀಯ ಕಾರಣಗಳು :**

೧. ಬ್ರಿಟಿಷರ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ. ಲಾರ್ಡ್ ಡಾಲ್‌ಹೌಸಿಯು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾಗಿ ಅನೇಕ ದೇಸಿ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವಂತಾಯಿತು. ಮಕ್ಕಳಿಲ್ಲದ ರಾಜನು ತನ್ನ ಆಸ್ತಿಯನ್ನೆಲ್ಲ ಬ್ರಿಟಿಷ್ ಸರಕಾರಕ್ಕೆ ಬಿಟ್ಟು ಕೊಡಬೇಕಿತ್ತು. ಇಲ್ಲವಾದರೆ ಸರಕಾರ ಅಂಥ ರಾಜನ ಆಸ್ತಿಯನ್ನೆಲ್ಲ ತಾನೇ ವಶಪಡಿಸಿಕೊಳ್ಳುತ್ತಿತ್ತು. ಈ ನೀತಿಯಿಂದಾಗಿ ದೇಸಿ ಸಂಸ್ಥಾನಗಳನ್ನು ಬ್ರಿಟಿಷ್ ಸರಕಾರ ಎದುರು ಹಾಕಿಕೊಂಡಿತು.

೨. ಸಹಾಯಕ ಸೈನ್ಯ ಪದ್ಧತಿಯನ್ನು ಲಾರ್ಡ್ ವೆಲ್ಲೆಸ್ಲಿಯು ಜಾರಿಗೆ ತಂದನು. ಈ ನೀತಿಯಿಂದ ಬ್ರಿಟಿಷರು ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಆರಂಭಿಸಿದರು. ಇದರಿಂದಾಗಿ ಕಂಪನಿ ಸರಕಾರಕ್ಕೆ ಸೈನಿಕ ನಿರ್ವಹಣೆ ಸುಲಭವಾಯಿತು. ಈ ನೀತಿಯಿಂದಾಗಿ ಭಾರತೀಯ ರಾಜ್ಯಗಳನ್ನು ಆರ್ಥಿಕವಾಗಿ ತೀವ್ರವಾದ ಶೋಷಣೆಗೆ ಒಳಪಡಿಸಲಾಯಿತು. ಇದು ಭಾರತೀಯ ರಾಜ್ಯಗಳನ್ನು ತೀವ್ರ ಆಕ್ರೋಶಕ್ಕೆ ಒಳಪಡಿಸಿತು.

**ಆರ್ಥಿಕ ಕಾರಣಗಳು:**

೧. ಬ್ರಿಟಿಷರ ಭೂಕಂದಾಯ ನೀತಿಗಳಿಂದಾಗಿ ಭಾರತೀಯರು ಜೀವನಾಧಾರವಾದ ಉದ್ಯೋಗಗಳನ್ನು ಕಳೆದುಕೊಂಡರು.



೨. ಬ್ರಿಟಿಷರ ಕೈಗಾರಿಕಾ ನೀತಿಯಿಂದಾಗಿ ಭಾರತದ ಗುಡಿ ಕೈಗಾರಿಕೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು.

೩. ಭಾರತದಿಂದ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆಗೆ ಖರೀದಿಸಿ ಅವುಗಳನ್ನು ತಮ್ಮ ದೇಶಕ್ಕೆ ಕಳಿಸಿ ಸಿದ್ಧವಸ್ತುಗಳನ್ನು ಸಿದ್ಧಪಡಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು.

೪. ಸಂಪತ್ತಿನ ಸೋರಿಕೆ ಸಿದ್ಧಾಂತ ಎಂಬ ದಾದಾಬಾಯಿ ನವರೋಜಿಯವರ ಪುಸ್ತಕ ಬ್ರಿಟಿಷರ ಆಡಳಿತದ ವಿರುದ್ಧ ದನಿಯೆತ್ತುವ ಪ್ರಜ್ಞೆಯನ್ನು ಭಾರತೀಯರಲ್ಲಿ ಮೂಡಿಸಿತು.

**ಸಾಮಾಜಿಕ ಕಾರಣಗಳು:**

೧. ಬ್ರಿಟಿಷರು ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿದ್ದು ಭಾರತೀಯರ ಕೋಪಕ್ಕೆ ಕಾರಣವಾಯಿತು.

೨. ಬ್ರಿಟಿಷರು ವಿಧವಾ ಪುನರ್ ವಿವಾಹಕ್ಕೆ ಅವಕಾಶ ಮಾಡಿಕೊಟ್ಟದ್ದು, ಸತಿ ಪದ್ಧತಿಯನ್ನು ನಿಷೇಧಿಸಿದ್ದು ಭಾರತೀಯರ ಅಸಮಾಧಾನಕ್ಕೆ ಕಾರಣವಾಯಿತು.

೩. ಹಿಂದೂ ಧರ್ಮದ ಆಚಾರ ವಿಚಾರಗಳನ್ನು ಮತ್ತು ಭಾರತೀಯರನ್ನು ಕೀಳಾಗಿ ಕಂಡದ್ದು ಭಾರತೀಯ ಸಂಪ್ರದಾಯಬದ್ಧ ಸಮಾಜಕ್ಕೆ ಬ್ರಿಟಿಷರನ್ನು ಸಹಿಸುವುದು ಅಸಾಧ್ಯವಾಯಿತು.

೪. ಭಾರತೀಯರನ್ನು ಕ್ರಿಶ್ಚಿಯನ್ ಮಿಷನರಿಗಳು ಕ್ರೈಸ್ತ ಧರ್ಮಕ್ಕೆ ಮತಾಂತರಿಸಲು ಪ್ರೋತ್ಸಾಹಿಸಿದ್ದು ಭಾರತೀಯರ ಕೆಂಗಣ್ಣಿಗೆ ಗುರಿಯಾಯಿತು.

ಇವೇ ಮುಂತಾದ ಅಂಶಗಳು ಭಾರತೀಯರು ಬ್ರಿಟಿಷರನ್ನು ವಿರೋಧಿಸುವಂತೆ ಮಾಡಿದವು. ಇವುಗಳಂತೆಯೇ ಭಾರತೀಯರ ಜನಜೀವನದ ಮೇಲೆ ಪರಿಣಾಮ ಬೀರಿದ ಬ್ರಿಟಿಷರ ಮತ್ತೊಂದು ಕಾಯ್ದೆ ಎಂದರೆ ನಿಶಸ್ತ್ರೀಕರಣ ಕಾಯ್ದೆ. ತಮ್ಮ ಮೇಲೆ ಯಾರಿಗೂ ತಿರುಗಿ ಬೀಳುವುದು ಸಾಧ್ಯವಾಗಬಾರದು ಎಂಬ ಉದ್ದೇಶದಿಂದ ಕಂಪನಿ ಸರಕಾರ ಈ ಕಾಯ್ದೆಯನ್ನು ಜಾರಿಗೆ ತಂದಿತು.

ಬಿಳಿಯರನ್ನು ಎದುರುಹಾಕಿಕೊಳ್ಳುವ ತಾಕತ್ತಿಲ್ಲದ ರಾಜರುಗಳು, ಸಂಸ್ಥಾನಿಕರು ಯಾವ ವಿರೋಧವನ್ನೂ ಒಡ್ಡದೆ ನಿಶಸ್ತ್ರೀಕರಣ ಕಾಯ್ದೆಗೆ ಸಮ್ಮತಿ ಸೂಚಿಸಿ ತಮ್ಮ ಶಸ್ತ್ರಾಸ್ತ್ರಗಳನ್ನು ಅವರಿಗೆ ಒಪ್ಪಿಸಿದರು, ಸ್ವಾಭಿಮಾನಿಗಳು ಬಂಡಾಯವೆದ್ದರು. ಅಂಥ ಪ್ರತಿಭಟನೆಗಳಲ್ಲಿ ಮುಖ್ಯವಾದುದು ಹಲಗಲಿಯ ಬೇಡರ ಬಂಡಾಯ.

❑

# ೨. ಹಲಗಲಿ

ಭಾರತದ ಹಿರಿದಾದ ಇತಿಹಾಸದ ಪುಟಗಳಲ್ಲಿ ಢಾಳಾಗಿ ಕಾಣುವ ಪುಟ್ಟ ಗ್ರಾಮ ಹಲಗಲಿ. ಹಲಗಲಿ ಈಗಿನ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಪೂರ್ವದಲ್ಲಿರುವ ಒಂದು ಸಣ್ಣ ಹಳ್ಳಿ. ಈ ಗ್ರಾಮದ ಪೂರ್ವೋತ್ತರ ಭಾಗದಲ್ಲಿ ಗುಡ್ಡ ವ್ಯಾಪಿಸಿಕೊಂಡಿದೆ. ದಕ್ಷಿಣಕ್ಕೆ ಬೀಳಗಿ ತಾಲೂಕಿನ ಅರಕೇರಿ ಗ್ರಾಮವಿದೆ. ಅರಕೇರಿ ಮತ್ತು ಹಲಗಲಿ ಗ್ರಾಮಗಳ ಸೀಮೆಯಲ್ಲಿ ಸಣ್ಣ ಗುಡ್ಡವೊಂದು ಬರುತ್ತದೆ. ಕಲಾದಗಿ ಇಂದ ಮೆಳ್ಳಿಗೇರಿ ಕಡೆಗೆ ಹೋಗುವ ಈ ಊರ ಸೀಮೆಯ ದಾರಿಯನ್ನು ಐತಿಹಾಸಿಕವಾಗಿ ಮಹತ್ವದ ಘಟನೆಯೊಂದರ ನೆನಪಾಗಿ 'ದಂಡಿನ ದಾರಿ' ಎಂದು ಕರೆಯಲಾಗುತ್ತದೆ. ಹಲಗಲಿ ಸೀಮೆಯಲ್ಲಿರುವ ಸರನಾಯಕರ ಹೊಲವನ್ನು 'ರಗತ ಮನಿ' ಎಂದು ಕರೆಯಲಾಗುತ್ತದೆ. ಹಲಗಲಿಯ ಗುಡ್ಡದಲ್ಲಿ ಹಾದು ತೆಗ್ಗಿಯ ಕಡೆಗೆ ಸಾಗುವ ದಾರಿಯನ್ನು 'ನಂದಿಕೋಲ ದಾರಿ' ಎಂದು ಕರೆಯಲಾಗುತ್ತದೆ. ಹಲಗಲಿಯ ಸುತ್ತ ಹರಡಿರುವ ಈ ಹೆಸರುಗಳನ್ನು ಗಮನಿಸಿದರೆ ಈ ಊರಿಗಿರುವ ಚಾರಿತ್ರಿಕ ಪ್ರಾಮುಖ್ಯತೆಯನ್ನು ಅರ್ಥೈಸಿಕೊಳ್ಳಲು ಸ್ವಲ್ಪಮಟ್ಟಿಗಾದರೂ ಸಾಧ್ಯವಾಗುತ್ತದೆ.

ಹಲಗಲಿಯ ಗ್ರಾಮ ನಿಷ್ಪತ್ತಿಯನ್ನು ವ್ಯಕ್ತಿನಾಮ ಮೂಲದಿಂದ ಹುಡುಕುತ್ತಾ ಡಾ. ಶ್ರೀರಾಮ ಇಟ್ಟಣ್ಣವರ ಅದನ್ನು ಹೀಗೆ ನಿರ್ವಚಿಸುತ್ತಾರೆ. 'ಹಲಗ' ಎಂಬ ವ್ಯಕ್ತಿಯ ಹೆಸರಿನಲ್ಲಿ ಯಾವುದೋ ಕಾಲಕ್ಕೆ ಈ ಗ್ರಾಮ ನಿರ್ಮಾಣ ಗೊಂಡಿರಬಹುದು ಎಂದು ಊಹಿಸುತ್ತಾರೆ. ಜಡಗನೆಂಬ ವ್ಯಕ್ತಿಯು ಹಲಗಲಿ ಬಂಡಾಯದ ಕಾಲಕ್ಕಿದ್ದವನು. ಜಡಗನ ಪೂರ್ವಜರು ಸತ್ತಿಗೇರಿ ಸಪ್ಪಡ್ಲ ಕಡೆಯಿಂದ ಈ ಕಡೆಗೆ ಬಂದಾಗ ಇಲ್ಲಿ ಊರಿನ ಕುರುಹೇ ಇರಲಿಲ್ಲ. ಈ ಜನರೇ ಇಲ್ಲಿ ನೆಲೆ ನಿಂತರು. ಕಾಲಂತರದಲ್ಲಿ ಜನವಸತಿ ಬೆಳೆದು ಅದೇ ಹಲಗಲಿ ಊರಾಯಿತು

ಎಂದು ಬರೆಯುತ್ತಾರೆ. ಸತ್ತಿಗೇರಿಯಿಂದ ವಲಸೆ ಬಂದ ಪೂರ್ವಜರಲ್ಲಿ 'ಹಲಗ' ಎಂಬುವನೇ ಪ್ರಮುಖ ವ್ಯಕ್ತಿಯಾಗಿದ್ದು ಅವನಿಂದಲೇ ಹಲಗಲಿ ಎಂಬ ಹೆಸರು ಈ ಊರಿಗೆ ಬಂದಿತೆಂದು ಊಹಿಸುತ್ತಾರೆ.

ಹಲಗಲಿಯ ವ್ಯುತ್ಪತ್ತಿಯನ್ನು ಪಾಲಾಗಲ, ಪಾಲಾಗಲಿಗಳಲ್ಲಿಯೂ ನೋಡಬಹುದು. 'ಶತಪಥ' ಬ್ರಾಹ್ಮಣದಲ್ಲಿ ಮಾತ್ರ ಇವರಿಬ್ಬರದು (ಕರ್ಮಾರ ಮತ್ತು ರಥಕಾರ) ಸ್ಥಾನದಲ್ಲಿ ಗೋವಿನ ಕರ್ತ ಮತ್ತು ಪಾಲಾಗಲರನ್ನು ಹೆಸರಿಸಿದೆ. ಇವರು ಬೇಡರು ಮತ್ತು ದೂತರು ಎಂದು ತಿಳಿದುಬರುತ್ತದೆ. ಪಾಲಾಗಲ ಮತ್ತು ಗೋವಿನ ಕರ್ತರು ಶೂದ್ರ ಅಯಾಜ್ಞಕರು, ಪಾಲಾಗಲಿಯನ್ನು ಶಾಂಖಾಯನ ಸೂತ್ರ ಮತ್ತು ಶತಪಥ ಬ್ರಾಹ್ಮಣಗಳು ಶೂದ್ರ ಎಂದು ಕರೆದಿರುವುದನ್ನು ಆರ್. ಎಸ್.ಶರ್ಮರವರ 'ಪ್ರಾಚೀನ ಭಾರತದಲ್ಲಿ ಶೂದ್ರರು' ಎಂಬ ಕೃತಿ ಉಲ್ಲೇಖಿಸುತ್ತದೆ. ಈ ಉಲ್ಲೇಖವನ್ನು ಗಮನಿಸಿದರೆ ಪಾಲಾಗಲಿಯೇ ಕ್ರಮೇಣ ಹಲಗಲಿಯಾಗಿರುವುದು ಎಂದು ಊಹಿಸಲು ಅವಕಾಶವಿದೆ. ಈ ಮೇಲಿನ ವಿವರಣೆಯನ್ನು ಗಮನಿಸಿ ಹೇಳುವುದಾದರೆ ಪಾಲಾಗಲಿ ಅಥವಾ ಈಗಿರುವ ಹಲಗಲಿ ಮೂಲದಲ್ಲಿ ಬೇಡರ ವಸತಿ ಎಂದು ಕಂಡುಕೊಳ್ಳಲು ಅವಕಾಶವಿದೆ. ಹಾಗಾಗಿ ಹಲಗಲಿ ಗ್ರಾಮ ನಿಷ್ಪತ್ತಿಯನ್ನು ವೃತ್ತಿ ವಾಚಕದ ಹಿನ್ನೆಲೆಯಲ್ಲಿ ನೋಡುವುದು ಸೂಕ್ತವೆನಿಸುತ್ತದೆ.

ಹಲಗಲಿ ಗ್ರಾಮವು ಮೂಲತಃ ಬೇಡರ ವಸತಿ ಸಮುಚ್ಚಯವಾಗಿದ್ದು ಕಾಲಾಂತರದಲ್ಲಿ ಗ್ರಾಮವಾಗಿ ಬೆಳೆದಿರಬೇಕು ಎಂದು ಊಹಿಸಲು ಪುಷ್ಟಿ ನೀಡುವಂಥ ಅನೇಕ ಅಂಶಗಳನ್ನು ಈ ಗ್ರಾಮದ ಸುತ್ತಮುತ್ತಲು ಕಾಣುತ್ತೇವೆ.

**ಭೌಗೋಳಿಕತೆ:**

ಹಲಗಲಿಯ ಪೂರ್ವೋತ್ತರಕ್ಕೆ ೧೫೨೨.೫೯ ಹೆಕ್ಟೇರ್ ರಕ್ಷಿತ ಅರಣ್ಯವಿದೆ. ಈ ಗುಡ್ಡದಲ್ಲಿ ಉಸುಕು ಮಿಶ್ರಿತ ಕೆಂಪುಕಲ್ಲು ಹೇರಳವಾಗಿವೆ. ದಕ್ಷಿಣ ದಿಕ್ಕಿಗೆ ಸಣ್ಣ ಗುಡ್ಡವೊಂದು ವ್ಯಾಪಿಸಿಕೊಂಡಿದೆ. ಹೀಗೆ ಹಲಗಲಿ ಗ್ರಾಮ ಸೀಮೆಯ ಬಹಳಷ್ಟು ಪ್ರದೇಶವನ್ನು ಗುಡ್ಡವೇ ಆವರಿಸಿದೆ. ಈ ಗುಡ್ಡಗಳಲ್ಲಿ ದಿಂಡ್ಲಾ, ಹಲಗತ್ತಿ, ತುಗಲಿ, ಹುಲಗಲಿ, ನೆಲೆ ಅವರಿ, ಬಟ್ಟಿ ತೊಪ್ಪಲು, ಹೊರಮುಚಕ, ತುಳಸಿ ಮುಂತಾದ ಬಹುಪಯೋಗಿ ಗಿಡಗಳು ಹೇರಳವಾಗಿವೆ. ಕವಳಿ, ಕಾರಿ, ನಕರಿ, ಜಾನಿ ಹಣ್ಣಿನಂಥ ಕಾಡು–ಹಣ್ಣಿನ ಗಿಡಗಳು ತುರಿಕೆ ತರಿಸುವ ನಾಯಿ



ಉಳ್ಳಾಗಡ್ಡಿಗಳು ಈ ಭಾಗದಲ್ಲಿ ಬಹುವಾಗಿ ದೊರೆಯುತ್ತವೆ. ಇಲ್ಲಿ ದೊರೆಯುವ ಅನೇಕ ಬಗೆಯ ಗಿಡಗಳು ವಿಶೇಷ ಔಷಧಿ ಗುಣಗಳನ್ನು ಹೊಂದಿವೆ. ಈ ಗುಡ್ಡದ ಗಿಡಗಳಲ್ಲಿ ಅಪಾರ ಪ್ರಮಾಣದ ಅಂಟು ದೊರೆಯುತ್ತದೆ. ಹಾಗಾಗಿ ಅಂಟು ಬಿಡಿಸುವುದನ್ನೇ ವೃತ್ತಿಯನ್ನಾಗಿಸಿಕೊಂಡ ಕುಟುಂಬಗಳು ಈ ಪ್ರದೇಶದಲ್ಲಿವೆ.

ಹಲಗಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಚಹರೆಗಳನ್ನು ಕಾಣುತ್ತೇವಾದರೂ ಅವುಗಳ ಕುರಿತಾಗಿ ಅಧ್ಯಯನಗಳು ಆಗಿಲ್ಲ.

**ಮಜ್ಜಿಗೆ ಗಡಿಗೆವ್ವ:**

ಹಲಗಲಿಯ ದೊಡ್ಡಕೆರೆ ದಾಟಿ ತೆಗ್ಗಿಯ ಕಡೆಗೆ ಕಾಲು ದಾರಿಯಲ್ಲಿ ಹೋಗುವಾಗ ಹತ್ತುವ ಗುಡ್ಡಕ್ಕಿಂತ ಮೊದಲು ಕೊಳ್ಳದ ಭಾಗದಲ್ಲಿ 'ಮಜ್ಜಿಗೆ ಗಡಿಗೆವ್ವ' ಎಂದು ಆ ಭಾಗದ ಜನ ಆರಾಧಿಸುವ ಸ್ಥಾನವೊಂದು ಬರುತ್ತದೆ.

ಆ ಸ್ಥಳದಲ್ಲಿ ಒಂದು ದೊಡ್ಡ ಕಲ್ಲಿನಲ್ಲಿ ಒರಳನ್ನು ಕೊರೆಯಲಾಗಿದ್ದು ಅದು ಅಡ್ಡಲಾಗಿ ಬಿದ್ದಿದೆ. ಇದನ್ನು ಬಾರಿಸಿದರೆ ನಾದ ಹೊರಹೊಮ್ಮುತ್ತದೆ. ಇದರ ಪಕ್ಕದಲ್ಲಿ ನಕ್ಷತ್ರಾಕಾರದಲ್ಲಿ ಒಂದು ಕೊರೆದ ಕಲ್ಲಿದೆ. ಅದನ್ನು ಕಡೆಗೋಲೆಂದು ಹೇಳಲಾಗುತ್ತದೆ. ಇದರೊಂದಿಗೆ ಬೀಸುಕಲ್ಲಿನ ಆಕಾರದ ಇನ್ನೊಂದು ಕಲ್ಲು ಇಲ್ಲಿದೆ. ಒರಳಿನಂತಿರುವ ಕಲ್ಲನ್ನು ಗಡಿಗೆ ಎಂದೂ, ನಕ್ಷತ್ರಾಕಾರದ ಕಲ್ಲನ್ನು ಕಡೆಗೋಲೆಂದೂ ಕರೆಯುವರು. ಇದರಿಂದ ಬೆಣ್ಣೆ ತೆಗೆಯಲಾಗುತ್ತಿತ್ತು ಎಂದು ಇಲ್ಲಿಯ ಜನ ಪರಂಪರಾಗತವಾಗಿ ನಂಬುತ್ತಾರೆ. ಇದು ಪಾಂಡವರ ಕಾಲದ್ದೆಂದು, ಪಾಂಡವರು ಇದರಲ್ಲಿ ಬೆಣ್ಣೆ ತೆಗೆಯುತ್ತಿದ್ದರೆಂದೂ ಇಲ್ಲಿನವರು ಹೇಳುತ್ತಾರೆ. ಇದೇ ಮಜ್ಜಿಗೆ ಗಡಿಗೆಯನ್ನೇ ಪೂಜಿಸುತ್ತ ಕಾಲಾಂತರದಲ್ಲಿ ಅದೇ 'ಮಜ್ಜಿಗೆ ಗಡಿಗೆವ್ವ'ಳಾಗಿ ಜನಪದ ದೈವವಾಯಿತು.

ವರ್ಷಕ್ಕೊಮ್ಮೆ ದೀಪಾವಳಿ ಸುತ್ತ ಅರ್ಧ ಚಿತ್ತಿ ಮಳೆ ಕಳೆದ ನಂತರದಲ್ಲಿ ಹಲಗಲಿಯ ಬೇಡರು ಇವಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಆ ಪೂಜೆಗೆ ಬೇಟೆಯನ್ನೇ ನೈವೇದ್ಯ ಮಾಡುವದು ವಿಶೇಷ. ಈ ರೀತಿಯಲ್ಲಿ ಹಲಗಲಿಯ ಬೇಡರಿಗೂ ಮಜ್ಜಿಗೆ ಗಡಿಗೆವ್ವನಿಗೂ ಅವಿನಾಭಾವ ಸಂಬಂಧವಿರುವುದನ್ನು ಕಾಣುತ್ತೇವೆ.

**ಎಲುವು–ತಲೆಬುರುಡೆಗಳು:**

ಹಲಗಲಿಯಲ್ಲಿ ಮನೆ ಕಟ್ಟಲು ಎಲ್ಲಿ ನೆಲ ಅಗೆದರೂ ಅಪಾರ ಪ್ರಮಾಣದ ಆಯುಧಗಳು, ಎಲುವು, ತಲೆಬುರುಡೆಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಆಯುಧಗಳೆಲ್ಲ ಹಲಗಲಿ ಬಂಡಾಯದ ಸಂದರ್ಭದಲ್ಲಿ ಬೇಡರು ಬಚ್ಚಿಟ್ಟ ಶಸ್ತ್ರಾಸ್ತ್ರಗಳು. ದೊರೆಯುವ ತಲೆಬುರುಡೆಗಳೆಲ್ಲ ಬಂಡಾಯದಲ್ಲಿ ಮಡಿದವರವು ಎಂದು ಹಲಗಲಿಯ ಜನ ನಂಬುತ್ತಾರೆ. ನೆಲ ಅಗೆದಲ್ಲೆಲ್ಲ ಕತ್ತಿ ಕಠಾರಿಗಳು ಎಲುವುಗಳು ದೊರೆಯುತ್ತವೆ. ಅಗೆದಷ್ಟೂ ಎಲುವುಗಳು ದೊರೆಯುತ್ತಲೇ ಹೋಗುತ್ತವೆ. ಇದು ಆಶ್ಚರ್ಯದ ಸಂಗತಿ. ಎಷ್ಟು ಅಗೆಯುವುದೆಂದು ಬೇಸತ್ತು ಅವುಗಳ ಮೇಲೆ ಮಣ್ಣು ಮುಚ್ಚಿ ಮನೆ ಕಟ್ಟಿದ ಉದಾಹರಣೆಗಳೂ ಇವೆ.

ಐದಾರು ಅಡಿಗಳ ಆಳದಲ್ಲಿ ಎಲುವು ತಲೆಬುರುಡೆಗಳು ದೊರತರೆ ಅವು ಬಂಡಾಯದ ಸಂದರ್ಭದಲ್ಲಿನವು ಎಂದು ಒಪ್ಪಿಕೊಳ್ಳಬಹುದು. ಆದರೆ ವಾಮನರಾವ್ ಕುಲಕರ್ಣಿಯವರು ಮನೆ ಕಟ್ಟಿಸಲು ನೆಲ ಅಗೆದರೆ ಹದಿನೆಂಟು ಅಡಿಗಳಷ್ಟು ಅಳದಲ್ಲಿ ಕೂಡ ಈ ಅವಶೇಷಗಳು ದೊರೆಯುತ್ತವೆ. ಇದನ್ನು ನೋಡಿದರೆ ಇವು ಖಂಡಿತವಾಗಿಯೂ ಹಲಗಲಿ ಬಂಡಾಯಕ್ಕಿಂತ ಪೂರ್ವದವು ಇವು ಆಗಿರಬಹುದು. ಬಂಡಾಯದ ಕಾಲದವಾಗಿದ್ದರೆ ಹದಿನೆಂಟು ಅಡಿಗಳಷ್ಟು ಆಳಕ್ಕೆ ದೊರೆಯಬೇಕಾದ ಅವಶ್ಯಕತೆ ಇರಲಿಲ್ಲ ಎಂದು ಹಲಗಲಿಯ ಕುರಿತಾಗಿ ವಿಶೇಷ ಅಧ್ಯಯನ ನಡೆಸಿದ ಡಾ. ಶ್ರೀರಾಮ ಇಟ್ಟಣ್ಣವರ ಅಭಿಪ್ರಾಯಪಡುತ್ತಾರೆ.

ಹಲಗಲಿಯ ಬಸವಂತಪ್ಪ ದಂಡಿನ ಅವರ ಮನೆಯ ಅಂಗಳದಲ್ಲೂ ಇಂಥ ಅವಶೇಷಗಳು ದೊರೆತಿವೆ. ಹಿಂದೊಮ್ಮೆ ಇವರ ಅಂಗಳದಲ್ಲಿ ಏನೋ ಬಡಿಯುವಾಗ ಭೂಮಿಯಲ್ಲಿ ಢಣಢಣ ಎಂದು ಶಬ್ದವಾದಾಗ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯ. ಕುತೂಹಲದಿಂದ ಭೂಮಿಯನ್ನು ಅಗೆಯತೊಡಗಿದರು. ಆಳಕ್ಕೆ ಅಗೆದಂತೆ ಯಾವುದೋ ಕಾಲದ ಮೂರು ಮಡಿಕೆಗಳು ದೊರೆತವು. ಗಡಿಗೆಗಳ ಮೇಲೆ ಮುರುಗೆಯ ಸುಳುಹು, ಹೂವು ಮುಂತಾದ ಚಿತ್ರಗಳು ಈ ಮಡಿಕೆಗಳ ಮೇಲೆ ಇದ್ದವು. ಈ ಮೂರು ಮಡಿಕೆಗಳಲ್ಲಿ ಒಂದರಲ್ಲಿ ಮಸಿ, ಒಂದರಲ್ಲಿ ಮಣ್ಣು, ಇನ್ನೊಂದರಲ್ಲಿ ಎಲುವುಗಳಿದ್ದವು. ಏನು ಮಾಡುವುದೆಂದು ತಿಳಿಯದೆ ಮಡಿಕೆಗಳನ್ನು ಮತ್ತೆ ಅದೇ ಜಾಗಕ್ಕೆ ಹೂತುಬಿಟ್ಟಿರುವುದಾಗಿ ಹಲಗಲಿಯ ಜನ ಹೇಳುತ್ತಾರೆ.



ಹೀಗೆ ಹಲಗಲಿಯ ತುಂಬ ಅದರಲ್ಲೂ ವಿಶೇಷವಾಗಿ ಬಂಡಾಯ ನಡೆದ ಕವಲುದಾರಿಯ ಸುತ್ತಮುತ್ತ ಅಗೆದಲ್ಲೆಲ್ಲ ಇಂಥ ಏನಾದರೂ ಅವಶೇಷಗಳು ದೊರೆಯುತ್ತವೆ. ಹಲಗಲಿಯ ಜನ ಮಾತ್ರ ಇವೆಲ್ಲ ಬಂಡಾಯದಲ್ಲಿ ಮಾಡಿದವರ ಅವಶೇಷಗಳೆಂದು ನಂಬುತ್ತಾರೆ. ಭೂಮಿಯಲ್ಲಿ ದೊರೆಯುವ ಎಲುವು ಬುರುಡೆಗಳನ್ನು ಒಪ್ಪಿಕೊಳ್ಳಬಹುದಾದರೂ ಈ ರೀತಿ ಮಣ್ಣು ತುಂಬಿದ, ಮಸಿ ತುಂಬಿದ ಗಡಿಗೆಗಳು ಏಕೆ ಎಂಬ ಪ್ರಶ್ನೆ ವಿದ್ವಾಂಸರದು.

**ಕಟ್ಟಡದ ಅಡಿಪಾಯಗಳು :**

ದೊಡ್ಡ ಕೆರೆಯನ್ನು ದಾಟಿ ತೆಗ್ಗಿಯ ಕಾಲುದಾರಿ ಹಿಡಿದು ಹೊರಟರೆ ಮಜ್ಜಿಗೆ ಗಡಿಗೆವ್ವ ಮತ್ತು ಗಡ್ಡಿ ಈರಣ್ಣನ ಗುಡಿಯ ಮಧ್ಯದಲ್ಲಿ ಒಂದೆರಡು ಕಡೆಗಳಲ್ಲಿ ಕಟ್ಟಡದ ತಳಪಾಯಗಳು ದೊರೆಯುತ್ತವೆ. ಗುಡ್ಡದಿಂದ ಕೆರೆಗೆ ಬರುವ ನೀರು ಈ ಮೂಲಕವೇ ಹಾದು ಬರುತ್ತದೆ. ಅರಣ್ಯಪ್ರದೇಶದಲ್ಲಿ ಮನೆಗಳಿದ್ದುದನ್ನು ನೋಡಿದವರಾಗಲಿ, ಕೇಳಿದವರಾಗಲಿ ಈಗ ಇಲ್ಲ. ಆದರೆ ಪೂರ್ವದ ಯಾವುದೋ ಕಾಲದಲ್ಲಿ ಜನವಸತಿಯನ್ನು ನಿರ್ಮಿಸಿ ಕೊಂಡಿರಬಹುದು ಎಂದು ಊಹಿಸಲು ಅವಕಾಶವಿದೆ. ಬೇಟೆ, ಅಂಟು ಬಿಡಿಸುವಂಥ ಅರಣ್ಯದಲ್ಲಿ ಬದುಕು ಕಟ್ಟಿಕೊಳ್ಳುವ ಜನ ಕಾಡಲ್ಲೇ ವಸತಿ ಗಳನ್ನು ನಿರ್ಮಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಿರಬೇಕು. ಆ ನಂತರದಲ್ಲಿ ಮನುಷ್ಯ ನಾಗರಿಕನಾದಂತೆಲ್ಲ ಸುರಕ್ಷತೆಯನ್ನರಸಿ ಕಾಡಿನಿಂದ ದೂರಾಗಿ ವಸತಿ ನಿರ್ಮಿಸಿಕೊಂಡಿರುವುದು ತಿಳಿದಿರುವ ಸಂಗತಿ. ಇಲ್ಲೂ ಬಹುಶಃ ಅಂತದ್ದೇ ರೀತಿಯನ್ನು ಈ ತಳಪಾಯಗಳ ಹಿನ್ನೆಲೆಯಲ್ಲಿ ಕಾಣಬಹುದು.

**ಗುಡ್ಡದ ಮೇಲಿನ ಚಿತ್ರಗಳು :**

ಹಲಗಲಿಯ ಗುಡ್ಡಕ್ಕೆ ತನ್ನದೇ ಆದ ವಿಶೇಷತೆ ಇದೆ. ಕಣಿ ಬಸವಣ್ಣನ ಗುಡಿಯಿಂದ ಗವಿಗೆ ಹೋಗುವ ದಾರಿಯಲ್ಲಿ ನಾಲ್ಕು ಕಲ್ಲುಗಳು ಬಿದ್ದ ಸ್ಥಿತಿಯಲ್ಲಿ ಇವೆ. ಒಂದು ಕಲ್ಲಿನ ಮೇಲೆ ಸೂರ್ಯ, ಮಡಿಕೆ (ರೆಂಟೆ), ಅರ್ಧಚಂದ್ರಾಕೃತಿ ಹಾಗೂ ಏರಿಸಿ ಹಿಡಿದ ಛತ್ರಿ ಮತ್ತು ಕುದುರೆಯಾಕಾರದ ಚಿತ್ರಗಳಿವೆ. ಇನ್ನೊಂದು ಕಲ್ಲಿನ ಮೇಲೆ ಸೂರ್ಯ ಚಂದ್ರ ಮನುಷ್ಯ ಖಡ್ಗ ಹಾಗೂ ಕುದುರೆಯ ಕಲಾಕೃತಿಗಳಿವೆ. ಇವೆಲ್ಲವನ್ನು ನೋಡಿದರೆ ಈ ಸ್ಥಳ ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ್ದಿರಬಹುದು ಎಂದು ಊಹಿಸಲು ಇಲ್ಲಿನ ಚಿತ್ರಗಳು ಪುಷ್ಟಿ ನೀಡುತ್ತವೆ.

ಬಹುಶಃ ಪ್ರಾಗೈತಿಹಾಸಿಕ ಕಾಲದಲ್ಲಿ ಜನವಸತಿಯ ನೆಲೆಯಾಗಿರಬಹುದೆಂದು ಊಹಿಸಲು ಇಂಥವು ಸಾಕ್ಷಿ ನೀಡುತ್ತವೆ.

ಗ್ರಾಮದ ಸೀಮೆಯ ಬಹುಭಾಗ ಗುಡ್ಡವನ್ನೇ ಆವರಿಸಿದೆ. ಇಲ್ಲಿ ನಾನಾ ಬಗೆಯ ಸಸ್ಯ ಸಂಪತ್ತು ಹೇರಳವಾಗಿತ್ತು. ಅಂತೆಯೇ ಈ ಗುಡ್ಡದಲ್ಲಿ ಪ್ರಾಣಿಸಂಪತ್ತು ಅಪಾರವಾಗಿತ್ತು. ಹೀಗಾಗಿ ಸಹಜವಾಗಿ ಈ ಪ್ರದೇಶ ಬೇಡರ ಬದುಕಿಗೆ ಅನುಕೂಲಕರವಾಗಿತ್ತು. ಅಂತೆಯೇ ಅಂದಿನ ಬೇಡರು ಬೇಟೆಯಾಡುವ ಮೂಲಕ ಜೀವನ ಸಾಗಿಸುತ್ತಿದ್ದರು. ಕಾಡುಮೃಗಗಳೊಂದಿಗೆ ಕಾದಾಡಲು ಉತ್ತಮ ಜಾತಿಯ ನಾಯಿಗಳನ್ನು ಸಾಕುತ್ತಿದ್ದರು. ಅಷ್ಟೇ ಅಲ್ಲದೆ ಆ ನಾಯಿಗಳಿಗೆ ಕಾಡು ಪ್ರಾಣಿಗಳೊಂದಿಗೆ ಕಾದಾಡಲು ತರಬೇತಿ ನೀಡುತ್ತಿದ್ದರು. ಇವೇ ಹಲಗಲಿಯ ಬೇಟೆ ನಾಯಿ ತಳಿಗಳು ಇಂದು ದೇಶಾದ್ಯಂತ 'ಮುಧೋಳ ನಾಯಿ' ಎಂದು ಪ್ರಖ್ಯಾತಿ ಪಡೆದಿವೆ.

ಹಲಗಲಿಯ ಗುಡ್ಡದ ಅರಣ್ಯಪ್ರದೇಶದಲ್ಲಿ ತೋಳ, ನರಿ, ಮೊಲ, ಜಿಂಕೆಗಳಂತಹ ಕಾಡು ಪ್ರಾಣಿಗಳಿವೆ. ನವಿಲು, ಪಾರಿವಾಳ, ಗೊರವಂಕ, ಕೌಜುಗಗಳಂಥ ಕಾಡು ಪಕ್ಷಿಗಳಿವೆ. ಬೇಡರು ಈ ಪ್ರಾಣಿ–ಪಕ್ಷಿಗಳನ್ನು ಬೇಟೆಯಾಡುತ್ತಾ, ಕಾಡಲ್ಲಿನ ಗೆಡ್ಡೆಗೆಣಸುಗಳನ್ನು ತಿನ್ನುತ್ತಾ ಜೀವನ ನಿರ್ವಹಿಸುತ್ತಿದ್ದರು.

ಹಲಗಲಿಯ ಭೌಗೋಳಿಕ ಪರಿಸರ, ಗುಡ್ಡಗಳು, ಪ್ರಾಣಿ ಸಂಪತ್ತು, ಸಸ್ಯಸಂಪತ್ತು ಒಟ್ಟಾರೆಯಾಗಿ ಅರಣ್ಯ ಪ್ರದೇಶ ಬೇಟೆ ಆಧಾರಿತ ಬದುಕು ಸಾಗಿಸುವ ಬೇಡರಿಗೆ ಅತ್ಯಂತ ಹೇಳಿಮಾಡಿಸಿದ ಜಾಗದಂತಿತ್ತು. ಅತಿ ದಟ್ಟವಲ್ಲದ ಕಾಡು, ಅತಿ ಕ್ರೂರವಲ್ಲದ ಪ್ರಾಣಿಗಳಿಂದ ಕೂಡಿದ ಅರಣ್ಯ ಪ್ರದೇಶ ಇವೆಲ್ಲ ಬೇಡರು ಬದುಕು ಕಟ್ಟಿಕೊಳ್ಳಲು ಪ್ರಶಸ್ತವಾದ ಪ್ರದೇಶವಾಗಿತ್ತು. ಹೀಗಾಗಿ ಹಲಗಲಿಯಲ್ಲಿ ಹಿಂದಿನಿಂದ ಇಂದಿನವರೆಗೂ ಬೇಡ ಸಮುದಾಯವೇ ದೊಡ್ಡ ಜನ ಸಮುದಾಯವಾಗಿದೆ.

## ದಾಡಿ ಬಾಂಯವ್ವ :

ಹಲಗಲಿಯ ಬೇಡರ ಓಣಿಯಲ್ಲಿ ಬೇಡ ನೆಲಗೊಂಡ ದೇವತೆ ಈಕೆ. ಇವಳಿಗೆ ಸತ್ತಿಗೇರಿ ಸೊಪ್ಪಡ್ಲ ದಾಡಿ ಬಾಂಯವ್ವ ಎಂದು ಕರೆಯುತ್ತಾರೆ. ಈಗ



ಈ ದೇವತೆ ಜಡಗಣ್ಣವರ ಮನೆಗೆ ಸಂಬಂಧಪಟ್ಟವಳು. ಹಲಗಲಿಯ ಬಂಡಾಯಕ್ಕೆ ಹೊಳಹು ಹಾಕಿದ ಜಡಗನ ಮನೆತನ ಮೂಲತಃ ಸತ್ತಿಗೇರಿ ಸೊಪ್ಪಡ್ಲದವರೆಂದು ಹೇಳುತ್ತಾರೆ. ಈ ಕುರಿತಾಗಿ ಈಚೆಗೆ ಶ್ರೀ ಶ್ರೀಶೈಲ ಗೋಲಶೆಟ್ಟಿಯವರು ಹೆಳವರ ಹತ್ತಿರ ಮಾಹಿತಿಯನ್ನು ಕಲೆಹಾಕಿದ್ದಾರೆಂದು ಹೇಳುತ್ತಾರೆ.

ಅಂಜದಗಂಡು ಅವರ ಮನೆತನದವರು ಸತ್ತಿಗೇರಿ ಸಪ್ಪಡ್ಲದಿಂದ ಹಲಗಲಿಗೆ ಬರುವಾಗ ಅಲ್ಲಿನ ತಮ್ಮ ದೇವರಾದ ದಾಡಿ ಬಾಂಯವ್ವಳನ್ನೂ ಜೊತೆಯಲ್ಲಿ ತರುತ್ತಾರೆ. ಅವರು ಅಲ್ಲಿಂದ ಬಂದಾಗ ಇಲ್ಲಿ ಯಾವ ಊರೂ ಇರಲಿಲ್ಲ, ದೇವರೂ ಇರಲಿಲ್ಲ. ತಾವು ಹೊಸದಾಗಿ ಕಟ್ಟಿಕೊಳ್ಳುವ ಈ ಊರಲ್ಲಿ ತಾವು ನಂಬಿದ ತಮ್ಮೂರಿನ ದಾಡಿ ಬಾಂಯವ್ವಳನ್ನೇ ಇಲ್ಲೂ ಪ್ರತಿಷ್ಠಾಪಿಸಿಕೊಂಡರು. ಆ ಮೂಲಕ ಊರಿಲ್ಲದ ಊರಲ್ಲಿ ತಮ್ಮನ್ನೆಲ್ಲ ಆ ತಾಯಿ ರಕ್ಷಿಸುತ್ತಾಳೆನ್ನುವ ರಕ್ಷಣಾತ್ಮಕ ಮನೋಭಾವವನ್ನಿಲ್ಲಿ ಕಾಣುತ್ತೇವೆ.

## ಹಲಗಲಿ ಗ್ರಾಮ ರಚನೆ :

ಹಲಗಲಿ ಗುಡ್ಡದ ಕೆಳಗೆ ನೆಲೆಗೊಂಡಿದೆ. ಯಾವುದೋ ಕಾಲಕ್ಕೆ ಈ ಊರಿಗೆ ಸುತ್ತಲೂ ಕೋಟೆ ಇರುವ ಕುರುಹುಗಳನ್ನು ಅಲ್ಲಲ್ಲಿ ಅಳಿದುಳಿದ ಕೋಟೆಯ ಗೋಡೆಗಳು ನೀಡುತ್ತವೆ. ಅಲ್ಲಲ್ಲಿ ಬಿದ್ದ ಕೋಟೆ ಕಲ್ಲುಗಳು ಕೋಟೆಯ ಅವಸಾನದ ಕಥೆ ಹೇಳುತ್ತವೆ. ಈ ಕೋಟೆಯನ್ನು ಎಂದು ಯಾರು ಕಟ್ಟಿಸಿದರು ಎಂಬುದಕ್ಕೆ ಈಗ ಆಧಾರವಿಲ್ಲ. ಕೋಟೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇತ್ತೆಂದು ಹೇಳುತ್ತಾರಾದರೂ ಈಗ ಬಾಗಿಲಿತ್ತು ಎಂಬುದಕ್ಕೆ ಯಾವ ಸಾಕ್ಷಿಯೂ ಇಲ್ಲ. ಪ್ರವೇಶದ್ವಾರದ ಒಂದು ಕಡೆಯ ಗೋಡೆ ಮಾತ್ರ ಸ್ಪಷ್ಟವಾಗಿ ಕಾಣುತ್ತದೆ. ಹಲಗಲಿಯ ಈಗಿನ ಶಾಲೆ, ದವಾಖಾನೆಗಳೆಲ್ಲ ಕೋಟೆಯ ಹೊರಗಡೆಯೇ ಇವೆ. ಹೀಗೆ ದಕ್ಷಿಣ ಭಾಗಕ್ಕೇ ಊರು ಬೆಳೆಯುತ್ತಿದೆ. ಹಲಗಲಿಯ ಗ್ರಾಮಕ್ಕೆ ತನ್ನದೇ ಆದ ವಿಶೇಷ ರಚನಾ ವಿನ್ಯಾಸವಿದೆ.

ಈ ಗ್ರಾಮ ಇಂದು ಹನ್ನೊಂದು ಓಣಿಗಳಲ್ಲಿ ವಿಸ್ತರಿಸಿಕೊಂಡಿದೆ. ೧. ಗುಡಿ ಓಣಿ ೨. ನಡುವಿನ ಓಣಿ ೩. ತಗ್ಗಿನೋಣಿ ೪. ದಾಸರೋಣಿ ೫. ಹರಿಜನ ಓಣಿ ೬. ಮಡ್ಡಿ ಓಣಿ ೭. ಹಿರೇಕಣ್ಣವರ ಓಣಿ ೮. ಲಕ್ಕವ್ವನ ಗುಡಿ ಓಣಿ ೯. ಮುತ್ತೂರರ ಓಣಿ ೧೦. ದ್ಯಾಮವ್ವನ ಗುಡಿ ಓಣಿ. ೧೧. ಎರಡು ಪ್ಲಾಟ್ (ಅ) ಸರಕಾರಿ ಪ್ಲಾಟ್(ಬ) ಮಾಲಕಿ ಪ್ಲಾಟ್. ಹೀಗೆ ಹಲಗಲಿ ಊರು

ಸಾಮಾಜಿಕ ಸಂರಚನೆಗೆ ಅನುಗುಣವಾಗಿ ಹರಡಿಕೊಂಡಿದೆ. ಈ ಊರಲ್ಲಿ ಎಲ್ಲ ಜಾತಿಯ ಜನರಿದ್ದರೂ ಬೇಡ ಜಾತಿಯವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವರು.

ಇಂಥ ಹಲಗಲಿ ಮುಧೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟ ಗ್ರಾಮ. ಕಂಪನಿ ಸರಕಾರ ನಿಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದಾಗ ಸಂಸ್ಥಾನವು ಯಾವ ವಿರೋಧವಿಲ್ಲದೆ ಸಮ್ಮತಿಸಿ, ಶಸ್ತ್ರಾಸ್ತ್ರಗಳನ್ನು ಒಪ್ಪಿಸಿತು. ಆದರೆ ಅದೇ ಸಂಸ್ಥಾನದ ಹಲಗಲಿಯ ಬೇಡರು ನಿಶಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸುತ್ತಾರೆ, ಬಂಡಾಯವನ್ನೇ ಹೂಡುತ್ತಾರೆ.

❑

## ೩. ನಿಶಸ್ತ್ರೀಕರಣ ಕಾಯ್ದೆ

೧೮೫೭ರ ಮೇ ತಿಂಗಳಲ್ಲಿ ನಡೆದ ಸಿಪಾಯಿ ದಂಗೆಯಿಂದ ಬ್ರಿಟಿಷ್ ಸರಕಾರ ಪಾಠ ಕಲಿತಿತು. ಹೀಗಾಗಿ ಎಲ್ಲರನ್ನೂ ತನ್ನ ಅಂಕೆಯಲ್ಲಿ ಇಟ್ಟುಕೊಂಡು ತಾನು ಮಾತ್ರ ಬಲಶಾಲಿಯಾಗುವಂಥ ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯು ೧೮೫೭ರ ಸಪ್ಟೆಂಬರ್ ೧೧ ರಂದು ಭಾರತದಾದ್ಯಂತ ಜಾರಿಗೆ ಬಂದಿತು. ಈ ಕಾಯ್ದೆಯ ಪ್ರಕಾರ ಭಾರತೀಯರಾರಿಗೂ ಶಸ್ತ್ರಾಸ್ತ್ರಗಳನ್ನು ಹೊಂದುವ ಅವಕಾಶವಿರಲಿಲ್ಲ ತಮ್ಮಲ್ಲಿರುವ ಆಯುಧಗಳನ್ನು ಕಂಪನಿ ಸರಕಾರಕ್ಕೆ ಒಪ್ಪಿಸಬೇಕಾದ ಅನಿವಾರ್ಯತೆ ಇತ್ತು. ಆದಾಗ್ಯೂ ಶಸ್ತ್ರಾಸ್ತ್ರಗಳು ಬೇಕೆಂದಿದ್ದರೆ ಅಂಥವರು ತಮಗೆ ಬೇಕಿದ್ದ ಆಯುಧಗಳ ಅನುಮತಿಯನ್ನು ಪಡೆಯಬೇಕಿತ್ತು.

ನಿತ್ಯ ಜೀವನಕ್ಕೆ ಅತ್ಯಗತ್ಯವಾದ ಕೊಡಲಿ, ಕುಡುಗೋಲು, ಚೂರಿ, ಚಾಕು, ಕಠಾರಿ, ಭರ್ಚಿಗಳಂತಹ ಸಾಮಾನ್ಯ ಆಯುಧಗಳೂ ಶಸ್ತ್ರಾಸ್ತ್ರಗಳ ಸಾಲಿಗೆ ಸೇರಿದವು. ಇವು ದುಡಿಯುವವರಿಗೆ ದುಡಿಮೆಯ ಸಾಧನಗಳಾದರೆ, ಬ್ರಿಟಿಷರಿಗೆ ಶಸ್ತ್ರಾಸ್ತ್ರಗಳಾಗಿ ಕಂಡವು. ಇಂಥ ಸಾಮಾನ್ಯ ಆಯುಧಗಳನ್ನೂ ಸಹ ಕಂಪನಿ ಸರಕಾರಕ್ಕೆ ಒಪ್ಪಿಸಬೇಕೆಂದು ಸರಕಾರ ಆಜ್ಞೆ ಮಾಡಿತು. ಆಯುಧಗಳೇ ಅನ್ನವಾಗಿದ್ದ ಜನಸಾಮಾನ್ಯರನ್ನು ಈ ಕಾಯ್ದೆ ರೊಚ್ಚಿಗೆಬ್ಬಿಸಿತು.

ನಿಶಸ್ತ್ರೀರಣ ಕಾಯ್ದೆಯು ದುಡಿದು ತಿನ್ನುವ ತಳಸಮುದಾಯಗಳ ಅಸ್ತಿತ್ವವನ್ನೇ ಬುಡಮೇಲು ಮಾಡುವುದರಲ್ಲಿ, ಅವರ ಬದುಕನ್ನೇ ಅತಂತ್ರಗೊಳಿಸುವಲ್ಲಿ ನಿರತವಾಯಿತು. ಈ ಕಾರಣಕ್ಕಾಗಿಯೇ ದುಡಿಯುವ ವರ್ಗದ ಜನರೇ ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದರು. ಅಲ್ಲದೆ ಯಾವ ರಾಜರಾಗಲಿ ಬಂಡವಾಳಶಾಹಿಗಳಾಗಲಿ ಅವರನ್ನು ವಿರೋಧಿಸಲಿಲ್ಲ. ಬ್ರಿಟಿಷರನ್ನು

ವಿರೋಧಿಸಿದವರಲ್ಲೆಲ್ಲ ತಳವರ್ಗದ, ತಳಸಮುದಾಯಗಳ ಜನರೇ ಹೆಚ್ಚು. ಇದು ಬಡವರಿಗೆ ಅನ್ನದಷ್ಟೇ ದುಡಿಮೆಯೂ ಮಹತ್ವದ್ದು ಎಂಬುದನ್ನು ಸಾರುತ್ತದೆ.

ದುಡಿವ ಜನರ ಕೈಯಲ್ಲಿನ ಅಸ್ತ್ರಗಳನ್ನು ಕಸಿದುಕೊಳ್ಳುವ, ಆ ಮೂಲಕ ಇಡೀ ವರ್ಗವನ್ನೇ ನಿರ್ಗತಿಕರನ್ನಾಗಿಸುವ ಹೊನ್ನಾರ ನಿಶಸ್ತ್ರೀಕರಣ ಕಾಯ್ದೆಯ ಹಿಂದಿರುವುದನ್ನು ದುಡಿಯುವ ಜನರು ತಿಳಿದುಕೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ಶಸ್ತ್ರಾಸ್ತ್ರಗಳೇ ಅವರಿಗೆ ಅನ್ನ ನೀಡುವ ಸಾಧನಗಳು. ಆಯುಧಗಳು ಇಂಥವರಿಗೆ ಜೀವನ ನಿರ್ವಹಣೆಯ ದಾರಿಗಳು. ಜೀವನಕ್ಕೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳುವುದು ತಮ್ಮ ಹಕ್ಕೆಂದು ಭಾವಿಸಿದ ಜನರಿಗೆ ಈ ಕಾಯ್ದೆ ತೀವ್ರ ಆಘಾತವನ್ನು ನೀಡಿತು. ಅಂತೆಯೇ ನಿಶಸ್ತ್ರೀಕರಣ ಕಾಯ್ದೆಯನ್ನು ಜನ ಪ್ರತಿಭಟಿಸತೊಡಗಿದರು. ಆರ್ಥಿಕ ಸ್ವಾವಲಂಬಿತನ ಮತ್ತು ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಪ್ರತಿಭಟಿಸುವುದು, ಬಂಡಾಯವೇಳುವುದು ಎಲ್ಲ ಸಹಜವೇ.

ಈ ಕಾಲದಲ್ಲಿ ನಿಶಸ್ತ್ರೀಕರಣ ಕಾಯ್ದೆಯ ವಿರುದ್ಧ, ಬ್ರಿಟಿಷರ ವಿರುದ್ಧ ಭಾರತದ ಅನೇಕ ಕಡೆಗಳಲ್ಲಿ ಸ್ಥಳೀಯ ಪ್ರತಿಭಟನೆಗಳು ನಡೆದವು. ಅಂಥ ಪ್ರತಿಭಟನೆಗಳಲ್ಲಿ ಪ್ರಮುಖವಾದದ್ದು ಹಲಗಲಿ ಬಂಡಾಯ.

❑

## ೪. ಹಲಗಲಿ ಬಂಡಾಯ

ಹಲಗಲಿಯ ಬೇಡರು ಸ್ವಾಭಿಮಾನದಿಂದ ಬದುಕು ಸಾಗಿಸುತ್ತಿದ್ದರು. ಇವರು ಜೀವನೋಪಾಯಕ್ಕಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಈ ಸಮುದಾಯಕ್ಕೆ ಆಯುಧಗಳು ಅತ್ಯಗತ್ಯ. ಈ ಜನರಿಗೆ ಆಯುಧಗಳು ಅಗತ್ಯವಾದದ್ದು ಭೇಟೆಗೆ ಹೊರತಾಗಿ ಅಪರಾಧಕ್ಕಲ್ಲ. ಅಂದು ಬೇಟೆ ಜೀವನೋಪಾಯದ ಒಂದು ಪ್ರಮುಖ ಮಾಧ್ಯಮವಾಗಿತ್ತು. ಬದಲಾಗಿ ಇಂದಿನಂತೆ ಬೇಟೆ ಅಪರಾಧವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಬಂದ ಕಾಯ್ದೆ ನಿಶಸ್ತ್ರೀಕರಣ ಕಾಯ್ದೆ.

ಹಲಗಲಿ ಬ್ರಿಟಿಷರ ಆಡಳಿತ ಒಪ್ಪಿಕೊಂಡ ಮುಧೋಳ ಸಂಸ್ಥಾನದ ಅಧೀನಕ್ಕೊಳಪಟ್ಟ ಗ್ರಾಮ. ಈ ಸಂಸ್ಥಾನದಲ್ಲಿ ರಾಜಸಾಹೇಬ್ ಘೋರ್ಪಡೆ ಎಂಬುವವನು ಆಡಳಿತ ನಡೆಸುತ್ತಿದ್ದನು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಎಚ್ಚೆತ್ತುಕೊಂಡ ಬ್ರಿಟಿಷ್ ಸರ್ಕಾರ ತಮ್ಮ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ ಭಾರತೀಯರು ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ತಕ್ಷಣವೇ ಸರಕಾರಕ್ಕೆ ಒಪ್ಪಿಸಿ ಪರವಾನಗಿ ಪಡೆಯಬೇಕೆಂದು ೧೮೫೭ರ ಸಪ್ಟೆಂಬರ್ ೧೧ರಂದು ಆಜ್ಞೆ ಹೊರಡಿಸಿತು. ಈ ಆದೇಶ ಸರಕಾರದ ಅಧೀನಕ್ಕೊಳಪಟ್ಟ ಮುಧೋಳ ಸಂಸ್ಥಾನಕ್ಕೆ ಬೆಳಗಾವಿ ಮ್ಯಾಜಿಸ್ಟ್ರೇಟ್ ಲೆ. ಕ. ಜೆ. ಬಿ. ಸೆಟನಕರ್‌ನ ಮೂಲಕ ಬಂದಿತು.

ಮುಧೋಳ ಸಂಸ್ಥಾನದಲ್ಲಿ ಆತ್ಮಾಭಿಮಾನವುಳ್ಳ ಕೆಲ ಸೈನಿಕರು ಆರಂಭದಲ್ಲಿ ಶಸ್ತ್ರಾಸ್ತ್ರಗಳನ್ನು ನೀಡಲು ವಿರೋಧಿಸುತ್ತಾರೆ. ಆದರೆ ಪ್ರಭುತ್ವದೆದುರು ಸೋತು ಕಂಪನಿ ಸರಕಾರಕ್ಕೆ ತಮ್ಮ ಶಸ್ತ್ರಗಳನ್ನು ಒಪ್ಪಿಸುತ್ತಾರೆ.

ಮೂಲತಃ ಹಲಗಲಿಯವನು, ಸಂಸ್ಥಾನಿಕರ ಕುಲಬಾಂಧವನು ಆದ ಬಾಲಾಜಿ ನಿಂಬಾಳಕರ್ ಶಸ್ತ್ರಾಸ್ತ್ರ ನಿಷೇಧ ಕಾನೂನು ಹೇಗೆ ಭಾರತೀಯರನ್ನು

ಕಟ್ಟಿಹಾಕುತ್ತದೆ ಎಂದು ತಿಳಿದವರು. ಮುಧೋಳ ಸಂಸ್ಥಾನದಲ್ಲಿ ಈ ಕಾಯ್ದೆಯ ವಿರುದ್ಧ ಧ್ವನಿಯೆತ್ತಿದರು. ಆದರೆ ಅಲ್ಲಿ ಯಾರೂ ಇವನಿಗೆ ಸ್ಪಂದಿಸಲಿಲ್ಲ. ಹೀಗಾಗಿ ಸ್ವತಃ ತಾವೇ ಹಲಗಲಿಗೆ ಬಂದು ಬೇಡರನ್ನು ಸಂಘಟಿಸಿ ಈ ಕಾಯ್ದೆಯ ಕುರಿತು ಪ್ರಜ್ಞೆ ಮೂಡಿಸುತ್ತಾರೆ. ಅವರನ್ನು ಬ್ರಿಟಿಷರ ವಿರುದ್ಧ ಎತ್ತಿ ಕಟ್ಟುತ್ತಾರೆ.

ಆನಂತರದಲ್ಲಿ ಮುಧೋಳ ಸಂಸ್ಥಾನದ ಅಧೀನಕ್ಕೊಳಪಟ್ಟ ಹಲಗಲಿ ಗ್ರಾಮಕ್ಕೂ ಈ ಕಾಯ್ದೆ ತಲುಪಿತು. ಇದರ ಪ್ರಕಾರ ಮಾರಕ ಶಸ್ತ್ರಾಸ್ತ್ರಗಳನ್ನು ಯಾರೂ ಇಟ್ಟುಕೊಳ್ಳುವಂತೆ ಇರಲಿಲ್ಲ. ಇಂಥ ಆಯುಧಗಳನ್ನು ಹೊಂದಿದವರು ತಕ್ಷಣವೇ ಅವನ್ನೆಲ್ಲ ಸರಕಾರಕ್ಕೆ ಒಪ್ಪಿಸಬೇಕು ಎಂಬ ಆಜ್ಞೆಯಾಯಿತು. ಜೊತೆಗೆ ಬಚ್ಚಿಟ್ಟವರಿಗೆ ೩ ವರ್ಷ ಜೈಲುವಾಸ, ಪ್ರತಿಭಟಿಸಿದವರನ್ನು ಕೊಂದು ಹಾಕಲಾಗುವುದು ಎಂದು ಡಂಗುರ ಸಾರಿದರು. ಶಸ್ತ್ರಾಸ್ತ್ರಗಳನ್ನು ನಂಬಿ ಬದುಕು ಸಾಗಿಸುತ್ತಿದ್ದ ಹಲಗಲಿಯ ಬೇಡರು ತಮ್ಮಲ್ಲಿದ್ದ ಆಯುಧಗಳನ್ನು ಕಂಪನಿ ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿದರು.

ಬೆಳಗಾವಿಯ ಅಂದಿನ ಮ್ಯಾಜಿಸ್ಟ್ರೇಟರ್ ಆಗಿದ್ದ ಮಿ. ವಿಲಿಯಂ ಅಲೆಗ್ಸಾಂಡರ್ ಕರೆನ್ನಂ ಹಲಗಲಿಯ ಬೇಡರಿಗೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಎಚ್ಚರಿಕೆ ನೀಡಿದನು. ಅದೇ ತಾನೇ ಆಗಿಹೋಗಿದ್ದ ಸುರಪುರದ ನಾಯಕರ ಸ್ಥಿತಿ ತಮಗೂ ಉಂಟಾಗಬಾರದು ಎಂಬ ಕಾರಣಕ್ಕೆ ಹಲಗಲಿಯ ಬೇಡರು ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸಲು ಒಪ್ಪಲಿಲ್ಲ. ಕುಂದರಗಿಯ ಕೃಷ್ಣರಾವ್ ರಾಮರಾವ್ ಭುಜಂಗ ಎಂಬ ತನ್ನ ಕಾರಭಾರಿ ಕಾರಕೂನನನ್ನು ಬೇಡರ ಮನವೊಲಿಸಲು ಹಲಗಲಿಗೆ ಕಳುಹಿಸಿದನು. ಆ ಪ್ರಯತ್ನವೂ ವಿಫಲಗೊಂಡಿತು. ತದನಂತರ ಬೇಡ ಜಾತಿಗೆ ಸೇರಿದ ವೀರ ಹನುಮ ನಾಯಕನನ್ನು ಹಲಗಲಿಯ ಬೇಡರನ್ನು ಒಪ್ಪಿಸಲು ಕಳುಹಿಸುತ್ತಾರೆ. ಈ ಬೇಡರು ತಮ್ಮವನ ಮಾತಿಗೂ ಬಗ್ಗದೆ ಹನುಮ ನಾಯಕನನ್ನೇ ಅವಮಾನಿಸಿ ಕಳುಹಿಸುತ್ತಾರೆ.

ಇಷ್ಟೆಲ್ಲ ಪ್ರಯತ್ನಗಳು ವಿಫಲಗೊಂಡಾದ ಮೇಲೆ ಬ್ರಿಟಿಷ್ ಸರಕಾರ ಈ ಸಂಗತಿಯನ್ನು ಗಂಭೀರವಾಗಿ ಪರಿಗಣಿಸುತ್ತದೆ. ಬೇಡರು ಶಸ್ತ್ರಾಸ್ತ್ರವನ್ನು ಒಪ್ಪಿಸುವಂತೆ ತಿಳಿಹೇಳುವ ಜವಾಬ್ದಾರಿಯನ್ನು ಬ್ರಿಟಿಷ್ ಸರಕಾರ ದಿನಾಂಕ ೨೭–೧೧–೧೮೫೭ ರಂದು ಸರ್ದನ್ ಮರಾಠಾ ಪ್ರದೇಶದ ದಂಡನಾಯಕ ಲೆಫ್ಟಿನೆಂಟ್ ಕರ್ನಲ್ ಮಾಲ್ಕಂನಿಗೆ ವಹಿಸಿತು. ಕರ್ನಲ್ ಮಾಲ್ಕಂನು ಹಲಗಲಿಯ ಪರಿಸ್ಥಿತಿಯನ್ನು ಅರಿಯಲು ಅಂದಿನ ಜಿಲ್ಲಾ ಕೇಂದ್ರವಾದ ಕಲಾದಗಿಯಿಂದ ಆಂಗ್ಲ ಅಧಿಕಾರಿಯನ್ನು ಕಳುಹಿಸಿದ. ಈ ಅಧಿಕಾರಿ ಮತ್ತವನ ಸೈನ್ಯ ಹಲಗಲಿಯನ್ನು ಪ್ರವೇಶಿಸುತ್ತಿರುವದನ್ನು ಬೇಹುಗಾರ ಭೀಮಪ್ಪ ಕೋಟೆಯ ಮೇಲಿಂದಲೇ ಕಂಡ. ಅಧಿಕಾರಿಯ ಆಗಮನವನ್ನು ಗಮನಿಸಿ ಕವಣೆಗಲ್ಲು ಬೀಸಿ ಕುದುರೆಯ ಕಾಲು ಮುರಿದ. ಕುದುರೆ ಮುಗ್ಗರಿಸಿದೊಡನೆ ಕೆಳಗೆ ಬಿದ್ದ ಅಧಿಕಾರಿಯನ್ನು ಬೇಹುಗಾರ ಭೀಮಪ್ಪ ಬಂಧಿಸಿದ.



ಅಷ್ಟರಲ್ಲಿ ಭೀಮಪ್ಪನ ಅನುಚರರು ಅಧಿಕಾರಿಯೊಡನೆ ಬಂದ ಸೈನ್ಯವನ್ನು ಚೆಂಡಾಡಿದರು. ತನ್ನ ಸೈನ್ಯಕ್ಕೊದಗಿದ ಗತಿ ಕಂಡ ಬ್ರಿಟಿಷ್ ಅಧಿಕಾರಿ ಬಾಯಲ್ಲಿ ಹಲ್ಲುಕಚ್ಚಿ ಶರಣಾಗತನಾದ. ಯುದ್ಧನೀತಿ ಅನುಗುಣವಾಗಿ ಭೀಮಪ್ಪ ಅಧಿಕಾರಿಯನ್ನು ಕೊಲ್ಲದೆ ಕ್ಷಮಿಸಿದ. ಆ ಅಧಿಕಾರಿ ಹಲಗಲಿಯಲ್ಲಿ ಭೀಮಪ್ಪನಂಥ ಅನೇಕ ಶೂರರು ಅಲ್ಲಿ ಇರುವುದನ್ನು ಅರಿತನು. ಹಲಗಲಿಯ ಮೇಲೆ ದಾಳಿ ಮಾಡುವುದು ಅಷ್ಟು ಸರಳ ಸಾಧ್ಯವಲ್ಲದ ಕಾರ್ಯ ಎಂಬ ಸತ್ಯ ಅಧಿಕಾರಿಗೆ ಅರ್ಥವಾಯಿತು. ಕೂಡಲೇ ಮೇಲಧಿಕಾರಿಗಳಿಗೆ ಅಲ್ಲಿನ ಪರಿಸ್ಥಿತಿಯನ್ನು ಅರ್ಥ ಮಾಡಿಸಿದನು.

ಇದೊಂದು ಸಶಸ್ತ್ರ ಹೋರಾಟ ಎಂದು ಹಲಗಲಿಯ ಪರಿಸ್ಥಿತಿಯನ್ನು ಅರಿತುಕೊಂಡ ಮಿ.ಮಾಲ್ಕಂನು ಸೆನೆಟ್ ಕೆರ್ನ್‌ನಿಗೆ ವಿಜಯಪುರದ ಅಶ್ವದಳದೊಂದಿಗೆ ಬರಲು ಸೂಚಿಸಿದನು. ಮಿ.ಕೆರ್ನ್‌ನು ಬೇಡರಿಗೆ ಆಯುಧಗಳನ್ನು ಒಪ್ಪಿಸಲು ಕೊನೆಯ ಬಾರಿಗೆ ಅವಕಾಶ ನೀಡಿದರೂ ಬೇಡರು ನಿರಾಕರಿಸುತ್ತಾರೆ. ಆಯುಧಗಳು ಅವರಿಗೆ ಅಭಿಮಾನದ ಆಸ್ತಿ. ಅವನ್ನು ಬೇರೊಬ್ಬರಿಗೆ ಒಪ್ಪಿಸುವುದು ಅಪಮಾನವೆಂದು ತಿಳಿದರು. ಆಯುಧಗಳನ್ನು ಒಪ್ಪಿಸುವುದು ಬೇಡರಿಗೆ ಸ್ವಾಭಿಮಾನವನ್ನೇ ಒತ್ತೆಯಿಟ್ಟಂಥ ಅನುಭವ. ಹಾಗಾಗಿ ಹಲಗಲಿಯ ಬೇಡರು ಸಾವನ್ನು ಎದುರಿಸಲು ಸಿದ್ಧರಾದರು ಹೊರತಾಗಿ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವುದಿಲ್ಲ ಎಂದು ನಿರ್ಧರಿಸಿದರು.

ಬ್ರಿಟಿಷ್ ಸರ್ಕಾರ ಎಷ್ಟೇ ಅವಕಾಶ ಕೊಟ್ಟರೂ, ಪ್ರಯತ್ನಪಟ್ಟರೂ ಬೇಡರು ತಮ್ಮ ಆಯುಧಗಳನ್ನು ಒಪ್ಪಿಸದಿದ್ದುದು ಸರಕಾರಕ್ಕೆ ಹಠಮಾರಿತನವಾಗಿ ಕಂಡಿತು. ಹಾಗಾಗಿ ನವೆಂಬರ್ ೧೧, ೧೮೫೭ ರಂದು ೬೦೦ ಸಂಖ್ಯೆಯ ಸುಸಜ್ಜಿತ

ಬ್ರಿಟಿಷ್ ಅಶ್ವದಳ ಸೈನ್ಯವು ಹಲಗಲಿ ಗ್ರಾಮವನ್ನು ಪ್ರವೇಶಿಸಿತು. ಬ್ರಿಟಿಷ್ ಸೈನ್ಯವನ್ನು ಬೇಡರು ಕೆಚ್ಚೆದೆಯಿಂದ ಎದುರಿಸಿದರು. ಆಂಗ್ಲರ ದಾಳಿಗೆ ಕಂಗೆಡದೆ ವೀರಾವೇಶದಿಂದ ಹೋರಾಡಿದರು. ಬ್ರಿಟಿಷರು ಗುಂಡಿನ ಮಳೆಗರೆದರು, ಪ್ರತಿಯಾಗಿ ಬೇಡರು ಗುಂಡಿನ ಸುರಿಮಳೆಯನ್ನೇ ಸುರಿಸಿದರು. ಭರ್ಜಿ ಎಸೆದು, ಕವಣೆಗಲ್ಲು ಬೀಸಿ ಆಂಗ್ಲರ ಸೈನ್ಯಕ್ಕೆ ಆಘಾತ ಒಡ್ಡಿದರು. ಕುದುರೆಗಳ ಕಾಲು ಕಡಿದರು. ಎರಡೂ ಕಡೆಗಳಲ್ಲಿ ಅಪಾರ ಪ್ರಮಾಣದ ಸಾವು–ನೋವು ಸಂಭವಿಸಿತು. ಆದರೂ ಬೇಡರು ಧೈರ್ಯಗೆಡಲಿಲ್ಲ. ಬದಲಾಗಿ ಕಂಪನಿ ಸರಕಾರವೇ ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನು ಗಮನಿಸಿದ ಲೆಫ್ಟಿನೆಂಟ್ ಕರ್ನಲ್ ಸೆಟನಕರ್ ಹೆಚ್ಚಿನ ಸೈನ್ಯ ನೀಡಲು ಸರಕಾರಕ್ಕೆ ಕೇಳಿಕೊಳ್ಳುತ್ತಾನೆ. ಮರುದಿನವೇ ಲೆಫ್ಟಿನೆಂಟ್ ಕರ್ನಲ್ ವಾಲ್ಕಮ್ ಹೆಚ್ಚಿನ ಸೈನ್ಯದೊಂದಿಗೆ ಹಲಗಲಿಗೆ ಬಂದಿಳಿದ. ಈ ಮೂಲಕ ಅಪಾರ ಪ್ರಮಾಣದ ಆಧುನಿಕ ಶಸ್ತ್ರಾಸ್ತ್ರ, ಸೈನ್ಯ ತಮ್ಮ ಮೇಲೆ ಬಂದೆರಗುತ್ತಿದ್ದರೂ ಅಂಜದೆ ಅಳುಕದೆ ಸ್ವಾಭಿಮಾನಿ ಬೇಡರು ತಮ್ಮದೇ ಹಾದಿಯಲ್ಲಿ ಮುಂದುವರೆದರು.

ಫಸ್ಟ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟ್ ವಿಲಿಯಂ ಹೆನ್ರಿ ಹೆವಲಾಕ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಬೇಡರು ಗುಂಡು ಹೊಡೆದು ಕೊಂದರು. ಎರಡೂ ಪಡೆಗಳು ಸಮಾನ ಹೋರಾಟ ನಡೆಸಿದ ಫಲವಾಗಿ ಅಗಣಿತ ಸಾವು–ನೋವುಗಳು ಉಂಟಾದವು. ರಕ್ತ ಹೊಳೆಯಾಗಿ ಹರಿಯಿತು. ಹೆಣಗಳ ರಾಶಿಯೇ ಬಿದ್ದಿತು. ಹಲಗಲಿಯ ಬೇಡ ನಾಯಕರಾದ ಜಡಗ, ಬಾಲ, ಹಣಮ, ಭೀಮರ ನೇತೃತ್ವದಲ್ಲಿ ಬೇಡರೆಲ್ಲ ಒಂದಾಗಿ ಬೇಡರ ರಕ್ಷಣೆಗೆ ನಿಂತರು. ಈ ಬಂಡಾಯದಲ್ಲಿ ರಾಮವ್ವ ಎಂಬ ವೀರ ಬೇಡ ಮಹಿಳೆ ಮೂರು ಜನ ಆಂಗ್ಲರನ್ನು ಗುಂಡಿಕ್ಕಿ ಕೊಂದಳು. ಈ ಕಾಳಗದಲ್ಲಿ ಬೇಡರಾಗಲಿ, ಆಂಗ್ಲರಾಗಲಿ ಯಾರೊಬ್ಬರು ಗೆಲುವನ್ನು ಸಾಧಿಸಲಿಲ್ಲ. ಇಬ್ಬರೂ ಸಮಬಲದ ಹೋರಾಟವನ್ನು ಪ್ರದರ್ಶಿಸಿದರು. ಬೇಡರನ್ನು ಗೆಲ್ಲಲಾಗದೆ ಆಂಗ್ಲರು ಅಂದು ವಾಪಸ್ಸಾದರು.

ನೇರವಾಗಿ ಹಲಗಲಿಯ ಬೇಡರನ್ನು ಎದುರಿಸುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿತ ಬ್ರಿಟಿಷ್ ಸರಕಾರ ಕುತಂತ್ರದಿಂದ ನವಂಬರ್ ೨೯, ೧೮೫೭ರ ಮಧ್ಯರಾತ್ರಿ ಸುಮಾರು ೬೦೦ ಸಂಖ್ಯೆಯ ಅಶ್ವದಳದೊಂದಿಗೆ ಹಲಗಲಿಯ ಮೇಲೆ ದಾಳಿ ಮಾಡಿತು. ಲೆಫ್ಟಿನೆಂಟ್ ಕರ್ನಲ್ ಮಾಲ್ಕಂನು ಬೇಡರನ್ನು ಹಿಡಿಯಲು ಹಲಗಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯವನ್ನು ತಂದ. ಮುಂಬೈಯಿಂದ ಎನ್ ಆಯ್ ೨೮ನೇ ದಂಡಿನ ಗುಂಪೊಂದು ಮಿ. ಲಿಯಿಟನ್‌ನ ನೇತೃತ್ವದಲ್ಲಿ ಹಲಗಲಿಗೆ ಬಂದಿತು. ಅಂದಿನ ಜಿಲ್ಲಾ ಕೇಂದ್ರ ಕಲಾದಗಿಯಿಂದಲೂ ಸೈನ್ಯದ ತುಕಡಿಯೊಂದು ಬಂದಿಳಿಯಿತು. ಇಷ್ಟು ಸಂಖ್ಯೆಯ ಸೈನ್ಯವನ್ನು ಒಗ್ಗೂಡಿಸಿಕೊಂಡು ಬಂದು ಮೋಸದಿಂದ ಹಲಗಲಿಯ ಮೇಲೆ ಬ್ರಿಟಿಷರು ದಾಳಿ ಮಾಡಿದರು.



ಮಧ್ಯರಾತ್ರಿಯೇ ಹಲಗಲಿಗೆ ಬೆಂಕಿಯಿಟ್ಟರು. ಮದ್ದಿನ ಮನೆಗೆ ಸೆಗಣಿ ಇಟ್ಟರು. ಊರಿಗೆ ಊರೇ ಹೊತ್ತಿ ಉರಿಯತೊಡಗಿತು. ದನಕರುಗಳ ಕೂಗು ಮಕ್ಕಳ ಚೀರಾಟ ಕೇಳಿ ರಕ್ಷಣೆಗೆ ಬಂದ ಎಲ್ಲರನ್ನೂ ಬ್ರಿಟಿಷರು ಗುಂಡಿಕ್ಕಿ ಕೊಂದರು. ಬ್ರಿಟಿಷರು ಯಾವ ಸಂದರ್ಭದಲ್ಲಾದರೂ ಹಲಗಲಿಯ ಮೇಲೆ ದಾಳಿ ಮಾಡಬಹುದೆಂದು ಮೊದಲೇ ಯೋಚಿಸಿ ಇಪ್ಪತ್ಮೂರು ಜನ ಯುವಕರು ಹತ್ತಿ ಕಟ್ಟಿಗೆಯಲ್ಲಿ ಅವಿತುಕೊಂಡು ಕುಳಿತಿದ್ದರು. ಇದನ್ನು ತಿಳಿದ ಆಂಗ್ಲರು ಮೋಸದಿಂದ ಬಂದು ಹತ್ತಿ ಕಟ್ಟಿಗೆಗೆ ಬೆಂಕಿ ಹಚ್ಚಿದರು. ಈ ಬೆಂಕಿಯಲ್ಲಿ ಇಪ್ಪತ್ಮೂರೂ ಜನ ಯುವಕರು ಸುಟ್ಟು ಕರಕಲಾದರು. ಇಡೀ ಊರಿಗೆ ಊರೇ ಅಕ್ಷರಶಃ ಹೊತ್ತಿ ಉರಿಯಿತು. ನೂರಾರು ಜನ ಈ ಬೆಂಕಿಯಲ್ಲಿ ಸುಟ್ಟು ಹೋದರು. ಬ್ರಿಟಿಷರಿಗೆ ಸೆರೆಯಾಳಾಗಿ ಚಿತ್ರಹಿಂಸೆ ಅನುಭವಿಸುವುದಕ್ಕಿಂತ ವೀರ ಮರಣ ಹೊಂದುವುದು ಲೇಸೆಂದು ಬೆಂಕಿಯಲ್ಲಿ ಸುಟ್ಟು ಹೋದ ಬೇಡರ ಸಂಖ್ಯೆಯೇ ಹೆಚ್ಚು. ಇಡೀ ಹಲಗಲಿ ಅಕ್ಷರಶಃ ಸ್ಮಶಾನವಾಯಿತು.

ಆಂಗ್ಲರು ಶಸ್ತ್ರ ನಗ ನಾಣ್ಯವನ್ನು ಅಷ್ಟೇ ಅಲ್ಲ ಉಡುವ, ಉಣ್ಣುವ ವಸ್ತುಗಳನ್ನೂ ಲೂಟಿ ಮಾಡಿದರು. ಅಳಿದುಳಿದವರನ್ನು ನಿರ್ಗತಿಕರನ್ನಾಗಿ ಮಾಡಿ ಹಲಗಲಿಯಲ್ಲಿ ಯಾರಿಗೂ ಬದುಕಲು ಬಾರದಂಥ ಸ್ಥಿತಿಯನ್ನು ನಿರ್ಮಾಣ ಮಾಡಿದರು. ಈ ದಂಗೆಯಲ್ಲಿ ಭಾಗವಹಿಸಿದ ಮನ್ನೂರಕ್ಕೂ ಹೆಚ್ಚು ಬೇಡರನ್ನು ಬಂಧಿಸಿ ದಾವೆ ಹೂಡಿ ಜೈಲಿಗೆ ಕಳುಹಿಸಿದರು.

ಡಿಸೆಂಬರ್ ೧೧, ೧೨, ೧೮೫೭ ರಂದು ಜಡಗ–ಬಾಲ ಮುಂತಾದ ಹತ್ತೊಂಬತ್ತು ಜನ ಬಂಡಾಯಗಾರರನ್ನು ಮುಧೋಳದಲ್ಲಿ ಸಂತೆಯ ದಿನ ಸಾರ್ವಜನಿಕರೆದುರೇ ಗಲ್ಲಿಗೇರಿಸಿದರು. ಡಿಸೆಂಬರ್ ೧೪ ರಂದು ಹಲಗಲಿಯಲ್ಲಿ ಹದಿಮೂರು ಜನರನ್ನು ಗಲ್ಲಿಗೇರಿಸಿದರು. ಮೂರು ತಿಂಗಳ ನಂತರ ಆರು

ಜನರನ್ನು ಹಲಗಲಿಯಲ್ಲಿ ನೇಣಿಗೇರಿಸಿದರು. ಹಲಗಲಿಯ ಬೇಡರನ್ನು ಬಂಡಾಯಗಾರರನ್ನಾಗಿ ಸಂಘಟಿಸಿದ್ದ ಬಾಲಾಜಿ ನಿಂಬಾಳಕರ್ ಎಂಬ ನಾಯಕನೂ ಈ ಬಂಡಾಯದಲ್ಲಿ ಹುತಾತ್ಮನಾದ.

ಜಡಗ ಬಾಲರನ್ನು ಗಲ್ಲಿಗೇರಿಸಿದ ಸ್ಮರಣಾರ್ಥವಾಗಿ ಮುಧೋಳದ ಪೇಟೆಯ ಜಾಗದಲ್ಲಿ ಒಂದು ಕಟ್ಟೆಯನ್ನು ಕಟ್ಟಲಾಗಿತ್ತು. ಇತ್ತೀಚಿನವರೆಗೂ ಆ ಕಟ್ಟೆ 'ಜಡಗಾ ಬಾಲ ಕಟ್ಟೆ' ಎಂದೇ ಪ್ರಸಿದ್ಧವಾಗಿತ್ತು. ಆದರೆ ಈಗ ಆ ಕಟ್ಟೆಯ ಸ್ಥಾನದಲ್ಲಿ ಗಾಂಧಿ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈಗ 'ಜಡಗಾ-ಬಾಲಾ ಕಟ್ಟೆ' ಯನ್ನು ಊರ ಹೊರಗೆ ಮಹಾಲಿಂಗಪುರ ರಸ್ತೆಯ ಬದಿಯಲ್ಲಿ ಕಟ್ಟಲಾಗಿದೆ.

ಹೀಗೆ ಹಲಗಲಿ ಬೇಡರು ಬ್ರಿಟಿಷರೆದುರು ತಮ್ಮ ಹಕ್ಕಿಗಾಗಿ ಸಾಹಸ ಧೈರ್ಯದಿಂದ ಹೋರಾಟ ಪ್ರದರ್ಶನ ಮಾಡಿ ಇತಿಹಾಸದ ಪುಟಗಳಲ್ಲಿ ಚಿರಂತನವಾಗಿ ಅಜರಾಮರರಾದರು. ರಕ್ತ ಕ್ರಾಂತಿಯನ್ನೇ ಮಾಡಿದರು. ದುಡಿಯುವ ಜನಕ್ಕೆ ಅನ್ನದಷ್ಟೇ ಆತ್ಮಾಭಿಮಾನವೂ ಮುಖ್ಯ ಎಂಬುದನ್ನು ಈ ಬಂಡಾಯ ಜಗತ್ತಿಗೆ ತೋರಿಸಿಕೊಟ್ಟಿತು. ಸ್ವಾಭಿಮಾನ, ಸ್ವಾವಲಂಬಿತನಕ್ಕಾಗಿ ಬ್ರಿಟಿಷರೆದುರು ಹೋರಾಡಿದ ಬೇಡರು ಹಲಗಲಿ ಎಂಬ ಪುಟ್ಟ ಗ್ರಾಮ ಭಾರತದ ಚರಿತ್ರೆಯಲ್ಲಿ ಎಂದೆಂದಿಗೂ ರಾರಾಜಿಸುವಂತೆ ಮಾಡಿದರು. ಈ ಬಂಡಾಯ ಮುಂದೆ ನಡೆದ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗೆ ಪ್ರೇರಕವಾಯಿತು.

❑

## ೫. ಹಲಗಲಿ ಬಂಡಾಯಗಾರರು

ಹಲಗಲಿಯ ಬೇಡರ ಬಂಡಾಯ ಭಾರತದ ಚರಿತ್ರೆಯಲ್ಲಿ ಮಹತ್ವದ ಘಟನೆ. ಇಲ್ಲಿ ಬಂಡಾಯವೆದ್ದವರು ಯಾರೂ ಶಿಕ್ಷಿತರಲ್ಲ, ಮೇಲ್ವರ್ಗದವರಲ್ಲ, ಮೇಲ್ಜಾತಿಯವರಲ್ಲ. ಇವರೆಲ್ಲ ಅಂದು ದುಡಿದು ಅಂದೇ ತಿನ್ನುವ ಜನ. ಸ್ವಾಭಿಮಾನವನ್ನೇ ಉಸಿರಾಗಿಸಿಕೊಂಡವರು. ಎಲ್ಲಿಂದಲೋ ಬಂದ ಆಂಗ್ಲರು ಅನ್ನ ನೀಡುವ ಅಸ್ತ್ರವನ್ನೇ ಒಪ್ಪಿಸಲು ಕೇಳಿದಾಗ ಪ್ರತಿಭಟನೆ ತೋರಿದವರು. ಇವರ ಪ್ರತಿಭಟನೆಯನ್ನು ಕಂಡ ಬ್ರಿಟಿಷರು ಹೇಗಾದರೂ ಮಾಡಿ ಬೇಡರ ಆಯುಧಗಳನ್ನು ಕಿತ್ತುಕೊಂಡು ಅವರನ್ನು ಅಬಲರನ್ನಾಗಿಸುವ ಹಟಕ್ಕೆ ಬಿದ್ದರು. ತಿನ್ನುವ ಅನ್ನವನ್ನು ಕಸಿದುಕೊಳ್ಳಲು ಅನುವಾದಾಗ ಮನುಷ್ಯ ದಂಗೆ ಏಳುವುದು ಸಹಜವೇ. ಬಡವರಿಗೆ ಅನ್ನದಷ್ಟೇ ಸ್ವಾಭಿಮಾನವೂ ಮುಖ್ಯ ಎಂಬುದನ್ನು ಸಾಬೀತು ಮಾಡಿದವರು ಹಲಗಲಿಯ ಬೇಡರು.

ಹಲಗಲಿ ಬಂಡಾಯ ಪೂರ್ವನಿಯೋಜಿತವಲ್ಲದ ತತ್ಕಾಲೀನಕ್ಕೆ ತೋರಿದ ಒಂದು ಸಾಮೂಹಿಕ ದಂಗೆ. ಈ ಬಂಡಾಯದ ಮುಂದಾಳತ್ವ ವಹಿಸಿದವರಲ್ಲಿ ಬಾಲಾಜಿ ನಿಂಬಾಳ್ಕರ್, ಜಡಗಪ್ಪ ಜಡಗಣ್ಣವರ, ಬಾಲಪ್ಪ ಕೊಳ್ಳಣ್ಣವರ, ಹನುಮಪ್ಪ ಪೂಜೇರ, ಭೀಮಪ್ಪ ಚಿಕ್ಕಣ್ಣವರ ಪ್ರಮುಖರು. ಈ ನಾಲ್ಕೈದು ಜನರ ಗುಂಪು ಗಟ್ಟಿಯಾಗಿ ನಿಂತು ಬೇಡರನ್ನೆಲ್ಲ ಒಟ್ಟುಗೂಡಿಸಿ ಪರಿಸ್ಥಿತಿಯನ್ನು ಅರ್ಥಮಾಡಿಸಿದರು. ಎಲ್ಲರನ್ನೂ ಒಂದುಗೂಡಿಸಿಕೊಂಡು ಬ್ರಿಟಿಷರನ್ನು ಎದುರಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಸನ್ನದ್ಧರಾದರು. ಈ ಹೋರಾಟದಲ್ಲಿ ಭಾಗವಹಿಸಿದ ಪ್ರಮುಖರ ಪರಿಚಯವನ್ನು ಈ ಮುಂದೆ ಮಾಡಿಕೊಲಾಗಿದೆ.

**ಬಾಲಾಜಿ ನಿಂಬಾಳ್ಕರ್ :**

ಹಲಗಲಿ ಬಂಡಾಯದ ಮೂಲ ರೂವಾರಿ ಇವರೇ. ಮೂಲತಃ ಹಲಗಲಿಯವರಾದ ಮುಧೋಳ ಸಂಸ್ಥಾನಿಕರ ಕುಲ ಸಂಬಂಧಿಯೂ ಆಗಿದ್ದವರು. ಇವರು ಮುಧೋಳ ಸಂಸ್ಥಾನದ ಹೊಸಕೋಟೆಯ ಕಿಲ್ಲೆದಾರನಾಗಿದ್ದ. ಹೊಸಕೋಟೆಯು ಮುಧೋಳ ಸಂಸ್ಥಾನದ ದಕ್ಷಿಣ ಭಾಗದ ಕೊನೆಯ ಹಳ್ಳಿಯಾಗಿತ್ತು. ಈ ಊರ ರಕ್ಷಣೆಗಾಗಿ ಸಂಸ್ಥಾನಿಕರು ಭವ್ಯವಾದ ಕಿಲ್ಲೆಗಳನ್ನು, ಭತೇರಿಗಳನ್ನೂ ನಿರ್ಮಿಸಿದ್ದರು. ಇದೇ ಕಾರಣಕ್ಕೆ ಈ ಹೊಸಕೋಟೆಯನ್ನು 'ಕಿಲ್ಲಾ ಹೊಸಕೋಟಿ' ಎಂದೇ ಕರೆಯಲಾಗುತ್ತದೆ. ಬಾಲಾಜಿ ನಿಂಬಾಳ್ಕರ್ ಒಬ್ಬ ಸಾಹಸಿ ಪ್ರವೃತ್ತಿಯುಳ್ಳ ವ್ಯಕ್ತಿಯಾಗಿದ್ದರು. ಇವರಿಗೆ ಕಾನೂನು ಜ್ಞಾನವೂ ಇತ್ತು. ಹಾಗಾಗಿ ಬ್ರಿಟಿಷರು ಜಾರಿಗೆ ತಂದ ನಿಶಸ್ತ್ರೀಕರಣ ಕಾಯ್ದೆಯು ಭಾರತೀಯರನ್ನು ಹೇಗೆ ವ್ಯವಸ್ಥಿತವಾಗಿ ಅಸಹಾಯಕರನ್ನಾಗಿ ಮಾಡುತ್ತದೆ ಎಂಬುದನ್ನು ತಿಳಿದಿದ್ದ. ಇವರು ಮುಧೋಳ ಸಂಸ್ಥಾನದಲ್ಲಿ ನಿಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತರುವುದನ್ನು ವಿರೋಧಿಸಿದರು. ಆದರೆ ಅಲ್ಲಿ ಇವರ ವಿರೋಧಕ್ಕೆ ಮನ್ನಣೆ ದೊರೆಯಲಿಲ್ಲ. ಅವರಿಗೆ ಹೇಗಾದರೂ ಮಾಡಿ ಈ ಕಾಯ್ದೆಗೆ ವಿರೋಧ ಒಡ್ಡಲೇಬೇಕಿತ್ತು. ಅದಕ್ಕೆ ಇವರು ತನ್ನೂರೇ ಸರಿಯೆಂದುಕೊಂಡು ಹಲಗಲಿಗೆ ಬಂದರು.

ಬಾಲಾಜಿ ನಿಂಬಾಳ್ಕರ್ ಸ್ವತಃ ತಾವೇ ಹಲಗಲಿಗೆ ಹೋಗಿ ಅಲ್ಲಿನ ಬೇಡರನ್ನೆಲ್ಲ ಒಗ್ಗೂಡಿಸುತ್ತಾರೆ. ನಿಶಸ್ತ್ರೀಕರಣ ಕಾಯ್ದೆಯ ಕಾರಣ ಮತ್ತು ಪರಿಣಾಮಗಳನ್ನು ಅವರ ಮನಮುಟ್ಟುವಂತೆ ತಿಳಿ ಹೇಳುತ್ತಾರೆ. ಆ ಮೂಲಕ ಬೇಡರನ್ನೆಲ್ಲ ಬ್ರಿಟಿಷರ ವಿರುದ್ಧ ಹುರಿದುಂಬಿಸಿ ಅವರನ್ನೆಲ್ಲ ಬಂಡಾಯದ ಕಣಕ್ಕಿಳಿಸುತ್ತಾರೆ. ಮುಂದೆ ಇವರು ಹಲಗಲಿ ಬಂಡಾಯದಲ್ಲಿ ಸಕ್ರಿಯವಾಗಿ ಹೋರಾಡಿ ಅದೇ ಹೋರಾಟದಲ್ಲಿ ವೀರಮರಣವನ್ನು ಅಪ್ಪುತ್ತಾರೆ.

**ಜಡಗಪ್ಪ ಜಡಗಣ್ಣವರ :**

ಹಲಗಲಿ ಬಂಡಾಯದ ಬೇಡರಿಗೆ ಮುಖ್ಯಸ್ಥನೀತ. ಹಲಗಲಿ ಬಂಡಾಯಕ್ಕೆ ರೂಪುರೇಷೆ ನಿರ್ಮಿಸಿದವನೇ ಜಡಗಪ್ಪ. ಈತನ ಪೂರ್ವಜರು ಬೆಳಗಾವಿ ಜಿಲ್ಲೆಯ ಸತ್ತೀಗೇರಿಯಿಂದ ಹಲಗಲಿ ಗ್ರಾಮಕ್ಕೆ ವಲಸೆ ಬಂದಿದ್ದನ್ನು ಹಲಗಲಿಯ



ಜನ ಈಗಲೂ ಹೇಳುತ್ತಾರೆ. ಈತ ಜಡಗನೆಂದೇ ಚಿರಪರಿಚಿತ. ಜಡಗ ದೈವೀ ಅಂಶಗಳುಳ್ಳ ವ್ಯಕ್ತಿಯಾಗಿದ್ದನೆಂದು ಹಲಗಲಿಯ ಜನರ ನಂಬಿಕೆ.

ಹಲಗಲಿಯ ಕಣಿ ಬಸವಣ್ಣಪ್ಪನ ಗುಡಿ ಸುತ್ತಮುತ್ತಲ ಅರಣ್ಯ ಪ್ರದೇಶ ಕಡಿದು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿಕೊಂಡು ಬದುಕು ಕಟ್ಟಿಕೊಂಡಿದ್ದ ಪರಿಶ್ರಮಿ ಈತ. ಬ್ರಿಟಿಷರ ಕಿರಿಕಿರಿಗೆ ಬೇಸತ್ತು ಹಲಗಲಿ ಊರಿಗಿಂತ ಹೆಚ್ಚಾಗಿ ಹೊಲದಲ್ಲೋ, ಕಣಿ ಬಸವಣ್ಣನ ಗುಡಿಯಿಂದ ಒಂದು ಕಿಲೋಮೀಟರ್ ಅಂತರದಲ್ಲಿರುವ ತೆಗ್ಗಿ ಸೀಮೆಯಲ್ಲಿನ ಗುಡ್ಡದ ಗವಿಯಲ್ಲೋ ರಾತ್ರಿಗಳನ್ನು ಕಳೆಯುತ್ತಿದ್ದ.

ದಬ್ಬಾಳಿಕೆಗೆ ಬೇಸತ್ತ ಜಡಗ ಅವರ ವಿರುದ್ಧ ಬಂಡೇಳಲು ಅವಕಾಶಕ್ಕಾಗಿ ಕಾಯುತ್ತಿದ್ದ. ಅದೇ ವೇಳೆಗೆ ಸರಿಯಾಗಿ ನಿಶಸ್ತ್ರೀಕರಣ ಕಾಯ್ದೆ ಜಾರಿಗೆ ಬಂದಿತು. ಬಾಲಾಜಿ ನಿಂಬಾಳ್ಕರ್‌ನ ಪ್ರೇರಣೆಯಿಂದ ನಿಶಸ್ತ್ರೀಕರಣ ಕಾಯ್ದೆ ತಮ್ಮ ಬದುಕಿಗೆ ದುಃಸ್ಥಿತಿಯನ್ನು ತರುವುದೆಂದು ಅರಿತವನಾಗಿದ್ದ. ಹಲಗಲಿಯ ಬೇಡರನ್ನೆಲ್ಲ ಒಗ್ಗೂಡಿಸಿ ತಮಗೊದಗುವ ಆಪತ್ತನ್ನು ವಿವರಿಸಿ ಅವರೆಲ್ಲ ಬ್ರಿಟಿಷರ ವಿರುದ್ಧ ಬಂಡೇಳುವಂತೆ ಪ್ರಚೋದಿಸಿದ. ಒಂದು ಹಂತದವರೆಗೆ ಯಶಸ್ವಿಯೂ ಆದ.

ನಂತರ ನಡೆದ ಎರಡನೆಯ ಹಂತದ ದಂಗೆಯಲ್ಲಿ ಬ್ರಿಟಿಷರು ಇವನನ್ನು ಬಂಧಿಸಿದರು. ೧೮೫೭ ಡಿಸೆಂಬರ್ ೧೧ ರಂದು ಮುಧೋಳ ಸಂತೆ ಸೇರುವ ಸ್ಥಳದಲ್ಲಿ ಸಾರ್ವಜನಿಕರೆದುರು ಹತ್ತೊಂಬತ್ತು ಜನರನ್ನು ಗಲ್ಲಿಗೇರಿಸಿದರು. ಅವರಲ್ಲಿ ಜಡಗನೂ ಒಬ್ಬನಾಗಿದ್ದ.

**ಬಾಲಪ್ಪ ಕೊಳ್ಳಣ್ಣವರ :**

ಈ ಬಾಲಪ್ಪ ಬಾಲನೆಂದೇ ಪರಿಚಿತ. ಈತನು ಮೂಲತಃ ಹಲಗಲಿಯ ಪಕ್ಕದ ಗ್ರಾಮ ಅರಕೇರಿಯವನು. ಹಲಗಲಿ ಬಂಡಾಯದ ಸಂದರ್ಭದಲ್ಲಿ ಜಡಗನ ಜೊತೆಯಲ್ಲಿ ನಿಂತು ಹೋರಾಡಿದವನೀತ. ಬಾಲ ಜಡಗನ ತಂಗಿ ರಾಮವ್ವನ ಮಗ. ಸಂಬಂಧದಲ್ಲಿ ಜಡಗ–ಬಾಲರು ಮಾವ–ಅಳಿಯರಾಗಬೇಕು. ಇವರಿಬ್ಬರ ಮಧ್ಯ ಅವಿನಾಭಾವ ಸಂಬಂಧವಿತ್ತೆಂದು ಅದಕ್ಕಾಗೇ ಲವಕುಶರಂತೆ ಜಡಗ–ಬಾಲ ಎಂದು ಜೋಡಿಯಾಗೇ ಹೆಸರುಗಳನ್ನು ಹೇಳುವ ರೂಢಿ ಎನ್ನುತ್ತಾರೆ ಹಲಗಲಿಯ ಹಿರಿಯರು.

ಬಾಲಪ್ಪ ಪಕ್ಕದ ಊರಾದ ಅರಕೇರಿಯ ಹನುಮಂತ ದೇವರ ಪೂಜಾರಿ. ಇವನು ಹಲಗಲಿಯ ಬಂಡಾಯಕ್ಕಾಗಿಯೇ ಹಲಗಲಿಗೆ ಬಂದನೋ ಅಥವಾ ಈ ಮೊದಲೇ ಹಲಗಲಿಯಲ್ಲೇ ವಾಸಿಸುತ್ತಿದ್ದನೋ ತಿಳಿಯದು. ಅರಕೇರಿಯಾವನಾದರೂ ಇವನು ಪ್ರಸಿದ್ಧನಾದದು ಮಾತ್ರ ಹಲಗಲಿ ಬಂಡಾಯದಿಂದಲೇ. ಜಡಗನ ಗರಡಿಯಲ್ಲಿ ಬೆಳೆದ ಬಾಲನೂ ಮಾವನಂತೆ ಬ್ರಿಟಿಷರ ವಿರುದ್ಧ ಕಿಡಿಕಾರುತ್ತಿದ್ದ. ಮಾವ ಬ್ರಿಟಿಷರ ವಿರುದ್ಧ ಬಂಡೆದ್ದಾಗ ಬಾಲ ಸದಾ ಜಡಗನಿಗೆ ಹೆಗಲೆಣೆಯಾಗಿ ನಿಂತನು. ಕಾಳಗದಲ್ಲಿ ಬ್ರಿಟಿಷರು ಇವನನ್ನು ಬಂಧಿಸುತ್ತಾರೆ. ಬಾಲನನ್ನು ೧೮೫೭ ಡಿಸೆಂಬರ್ ೧೧ ರಂದು ಮುಧೋಳದ ಸಂತೆ ಸೇರುವ ಸ್ಥಳದಲ್ಲಿ ಗಲ್ಲಿಗೇರಿಸುತ್ತಾರೆ. ಜಡಗಾ ಬಾಲರು ಹೋರಾಟದಲ್ಲೂ ಜೊತೆಯಲ್ಲಿದ್ದು, ನೇಣುಗಂಬಕ್ಕೂ ಜೊತೆಯಾಗಿಯೇ ಕೊರಳು ಕೊಟ್ಟದ್ದು ವಿಶೇಷ.

**ಹನುಮಂತಪ್ಪ ಪೂಜೇರ :**

ಇವನು ಗೋಕಾಕ ತಾಲೂಕಿನ ಕಲ್ಲೊಳ್ಳಿ ಗ್ರಾಮದವನು. ಕಲ್ಲೊಳ್ಳಿಯ ಹನುಮಂತ ದೇವರ ಪೂಜಾರಿ ಈತ. ಊರ ಗೌಡರೊಂದಿಗೆ ಮನಸ್ತಾಪವಾಗಿ ಊರು ಬಿಟ್ಟು ಹಲಗಲಿಗೆ ಬಂದ. ಇಲ್ಲಿಗೆ ಬಂದು ಅಲೆದಾಡುತ್ತಿರುವ ಪೂಜೇರ ಹನುಮನನ್ನು ಜಡಗಣ್ಣವರ, ಓಬಣ್ಣವರ, ನಿಂಬಾಳ್ಕರ್ ಮುಂತಾದ ಊರ ಪ್ರಮುಖರೆಲ್ಲ ಸೇರಿ ಇವನು ಯಾರು ಎತ್ತ ಎಂದು ವಿಚಾರಿಸಿದರು. ಇವನು ಕಲ್ಲೊಳ್ಳಿಯ ಹನುಮಂತ ದೇವರ ಪೂಜಾರಿ ಎಂದು ತಿಳಿದಮೇಲೆ ಹಲಗಲಿಯಲ್ಲಿಯೂ ಇವನಿಗೆ ಹನುಮಂತದೇವರ ಪೂಜಾರಿಕೆಯನ್ನೇ ನೀಡಿದರು. ಜೀವನ ನಿರ್ವಹಣೆಗೆ ಏಳೆಂಟು ಕೂರಿಗೆ ಜಮೀನು ನೀಡಿದರು. ಜಡಗಣ್ಣವರ ಮನೆಯ ಹೆಣ್ಣನ್ನು ಕೊಟ್ಟು ಮದುವೆಯನ್ನೂ ಮಾಡಿದರು. ಅನಂತರದಲ್ಲಿ ಹನುಮ ಶಾಶ್ವತವಾಗಿ ಹಲಗಲಿಯಲ್ಲಿಯೇ ನೆಲೆನಿಂತನು. ಹೆಣ್ಣು ಕೊಟ್ಟು ಮದುವೆ ಮಾಡಿದ ನಂತರ ಜಡಗಣ್ಣವರು ಇವರಿಗೆ ಬೀಗರಾದರು.

ಹಲಗಲಿ ಬಂಡಾಯದಲ್ಲಿ ಪ್ರಮುಖರಾದ ಜಡಗ ಬಾಲರ ನಂತರದಲ್ಲಿ ಕೇಳಿಬರುವ ಪ್ರಮುಖ ಹೆಸರು ಪೂಜೇರಿ ಹನುಮನದು. ಇವನು ಮುನ್ನೂರು ಜನ ಬ್ರಿಟಿಷ್ ಸೈನಿಕರನ್ನು ಒಬ್ಬನೇ ಎದುರಿಸಿದ್ದಾಗಿ ಹಲಗಲಿ ಲಾವಣಿ ಹೇಳುತ್ತದೆ.



ಬಂಡಾಯದ ಹೋರಾಟದಲ್ಲಿ ಆರು ಗುಂಡುಗಳನ್ನು ಬಡಿಸಿಕೊಂಡು ವೀರ ಮರಣವನ್ನಪ್ಪಿದ.

ಹನುಮಪ್ಪ ಪೂಜೇರನ ಮನೆತನದ ಈಗಿನ ನಾಲ್ಕನೆಯ ತಲೆಮಾರಿನ ದುಂಡಪ್ಪ ಪಾಂಡಪ್ಪ ಪೂಜೇರಿ ಅವರವರೆಗೂ ಹನುಮಪ್ಪನವು ಎನ್ನಲಾದ ಆಯುಧಗಳನ್ನು ಇಟ್ಟುಕೊಳ್ಳಲಾಗಿತ್ತು. ಇತ್ತೀಚಿಗೆ ಆ ಅಸ್ತ್ರಗಳನ್ನೆಲ್ಲಾ ಮುರಿಸಿ ಕೊಡಲಿ ಕುಡುಗೋಲು ಮುಂತಾದ ಕೃಷಿ ಉಪಕರಣಗಳನ್ನು ಮಾಡಿಸಿದ್ದಾಗಿ ಹೇಳುತ್ತಾರೆ. ಪೂಜೆಗಾಗಿ ಒಂದು ಆಯುಧವನ್ನು ಇಟ್ಟುಕೊಂಡು ಅದನ್ನೇ ಜಗುಲಿಯ ಮೇಲಿಟ್ಟು ಪೂಜಿಸುವುದಾಗಿ ಆ ಮನೆತನದವರು ಹೇಳುತ್ತಾರೆ. ಹಲಗಲಿಯ ಹನುಮಂತದೇವರ ಪೂಜಾರಿಕೆಯನ್ನು ಈಗಲೂ ಈ ಪೂಜಾರ ಹನುಮಪ್ಪನ ಮನೆತನದವರೇ ಮಾಡುತ್ತಿರುವರು.

**ಭೀಮಪ್ಪ ಚಿಕ್ಕಣ್ಣವರ :**

ಬಂಡಾಯದ ಮುಂದಾಳತ್ವ ವಹಿಸಿದ ಪ್ರಮುಖರಲ್ಲಿ ಭೀಮಪ್ಪನೂ ಒಬ್ಬ. ಭೀಮಪ್ಪನ ಕೆಲಸ ಬೇಹುಗಾರಿಕೆ ಮಾಡುವುದು. ಹಲಗಲಿಯ ಕೋಟೆಯ ಮೇಲೆ ನಿಂತು ಬ್ರಿಟಿಷರ ಚಲನವಲನ ಗಮನಿಸುವುದೇ ಇವನ ಕೆಲಸವಾಗಿತ್ತು. ಜನ ಇವನನ್ನು ಬೇಹುಗಾರ ಭೀಮಪ್ಪನೆಂದೇ ಕರೆಯುತ್ತಿದ್ದರು.

ಹಲಗಲಿ ಬಂಡಾಯದ ಸಂದರ್ಭದಲ್ಲಿ ಮೊದಲ ಬಾರಿ ಬ್ರಿಟಿಷ್ ಅಧಿಕಾರಿಯೊಬ್ಬ ತನ್ನ ಸೈನ್ಯದೊಂದಿಗೆ ಹಲಗಲಿಯ ಪರಿಸ್ಥಿತಿ ನೋಡಿಕೊಂಡು ಹೋಗಲು ಬಂದಿದ್ದನು. ಅಧಿಕಾರಿಯು ಹಲಗಲಿ ಒಳಗೆ ಪ್ರವೇಶ ಮಾಡುತ್ತಿರುವುದನ್ನು ದೂರದಿಂದಲೇ ಕಂಡ ಭೀಮಪ್ಪ ಬ್ರಿಟಿಷ್ ಅಧಿಕಾರಿಯ ಕುದುರೆಗೆ ಕವಣೆಗಲ್ಲು ಬೀಸಿ ಒಗೆದು ಕುದುರೆಯನ್ನು ನೆಲಕ್ಕುರುಳಿಸಿದನು. ಅದರೊಂದಿಗೆ ಅಧಿಕಾರಿಯೂ ಕೆಳಗೆ ಬಿದ್ದನು. ಅಧಿಕಾರಿಯನ್ನು ತಕ್ಷಣವೇ ಭೀಮಪ್ಪ ಬಂಧಿಸುತ್ತಾನೆ. ಅಷ್ಟರಲ್ಲಿ ಉಳಿದ ಬೇಡರು ಅಧಿಕಾರಿಯೊಂದಿಗೆ ಬಂದಿದ್ದ ಸೈನ್ಯದವರಲ್ಲಿ ಅನೇಕರ ರುಂಡ ತೆಗೆಯುತ್ತಾರೆ. ಇದನ್ನು ಗಮನಿಸಿದ ಬ್ರಿಟಿಷ್ ಅಧಿಕಾರಿ ಬಾಯಲ್ಲಿ ಹುಲ್ಲುಕಡ್ಡಿ ಕಚ್ಚುತ್ತಾನೆ. ಹಾಗೆ ಹುಲ್ಲು ಕಚ್ಚಿದರೆ ಶರಣಾಗತನಾದಂತೆ. ಅಂಥವನನ್ನು ಕೊಲ್ಲಬಾರದೆಂದು ರಣನೀತಿ ಹೇಳುತ್ತದೆ. ಅದಕ್ಕೆ ಬೇಹುಗಾರ ಭೀಮಪ್ಪ ಅಧಿಕಾರಿಯನ್ನು ಕ್ಷಮಿಸಿ ಜೀವಂತ ಹೋಗಲು ಬಿಡುತ್ತಾನೆ. ಊರಿಂದ ಹೋಗುವ ಮೊದಲು ಅಧಿಕಾರಿಯು “ಈ ಊರಲ್ಲಿ

ನೀನೆ ಶೂರನೋ ಅಥವಾ ನಿನಗಿಂತ ಶೂರರಿರುವರೋ?" ಎಂದು ಕೇಳುತ್ತಾನೆ. ಅದಕ್ಕೆ ಭೀಮಪ್ಪ "ನಾನು ಬಾಗ್ಲಾ ಕಾಯೊ ಆಳು ಊರೊಳಗ ನಮ್ಮಪ್ಪನಂಥ ಶೂರರದಾರ" ಎಂದನಂತೆ. ಈ ಮಾತನ್ನು ಕೇಳಿದ ಅಧಿಕಾರಿಗೆ ಪರಿಸ್ಥಿತಿಯ ಗಂಭೀರತೆ ಅರ್ಥವಾಯಿತು. ಅಧಿಕಾರಿಯೊಬ್ಬನನ್ನು ಊರೊಳಗೆ ಪ್ರವೇಶಿಸದಂತೆ ತಡೆದ ಶೂರ ಈ ಬೇಹುಗಾರ ಭೀಮಪ್ಪ. ಇವನಿಂದಲೇ ಬ್ರಿಟಿಷರಿಗೆ ಬೇಡರ ಶೌರ್ಯ ಸಾಹಸಗಳು ಮನದಟ್ಟಾದವು. ಇವನೂ ಬಂಡಾಯದ ಹೋರಾಟದಲ್ಲಿ ವೀರಮರಣವನ್ನು ಹೊಂದುತ್ತಾನೆ.

**ಮಹಿಳಾ ಬಂಡಾಯಗಾರರು :**

ಹಲಗಲಿ ಬಂಡಾಯದಲ್ಲಿ ಪುರುಷರಿಗಿಂತ ತಾವೇನು ಕಡಿಮೆಯಿಲ್ಲ ಎಂಬುದನ್ನು ಸಾಬೀತು ಮಾಡಿದವರು ಹಲಗಲಿಯ ಬೇಡ ಮಹಿಳೆಯರು. ಇವರು ಬಂಡಾಯದಲ್ಲಿ ತೊಡಗಿಸಿಕೊಂಡ ಗಂಡ ಮಗ ಸಹೋದರರ ಬೆನ್ನೆಲುಬಾಗಿ ನಿಂತವರು. ಕೆಲವು ಮಹಿಳೆಯರಂತೂ ಸ್ವತಃ ತಾವೂ ಈ ಹೋರಾಟದಲ್ಲಿ ಧುಮುಕಿದರು. ಅವರಲ್ಲಿ ಪ್ರಧಾನವಾಗಿ ಮೂರ್ನಾಲ್ಕು ಜನ ಮಹಿಳೆಯರ ಹೆಸರುಗಳು ಕೇಳಿಬರುತ್ತವೆ. ಅವರಲ್ಲಿ ರಾಮವ್ವಳ ಕುರಿತಾಗಿ ಮಾತ್ರ ಕೆಲವಷ್ಟು ಮಾಹಿತಿಗಳು ದೊರೆಯುತ್ತವೆ ಅಷ್ಟೇ. ಉಳಿದಿಬ್ಬರ ಹೆಸರುಗಳು ಮಾತ್ರ ಉಲ್ಲೇಖಗೊಳ್ಳುತ್ತವೆ.

**ರಾಮವ್ವ :**

ಇವಳು ಮೂಲತಃ ಹಲಗಲಿಯ ಹೆಣ್ಣುಮಗಳು. ಹಲಗಲಿ ಬಂಡಾಯದ ಮುಂಚೂಣಿ ನಾಯಕನಾದ ಜಡಗನ ಸಹೋದರಿ ಈಕೆ. ಇವಳನ್ನು ಹಲಗಲಿಯ ಪಕ್ಕದ ಊರಾದ ಅರಕೇರಿಗೆ ಮದುವೆ ಮಾಡಿಕೊಟ್ಟಿದ್ದರು. ಇವಳ ಮಗನೇ ಬಂಡಾಯದಲ್ಲಿ ಜಡಗನ ಬಲಗೈ ಬಂಟನಾದ ಬಾಲಪ್ಪ. ಬ್ರಿಟಿಷರ ದಬ್ಬಾಳಿಕೆಗೆ ರಾಮವ್ವಳು ಅವರ ವಿರುದ್ಧ ಸಿಡಿದೇಳುವಂತೆ ಮಾಡಿತು. ಜೊತೆಗೆ ಸಹೋದರ ಜಡಗ ಮತ್ತು ಮಗ ಬಾಲ ಬಂಡಾಯದಲ್ಲಿ ತೊಡಗಿಸಿಕೊಂಡ ರೀತಿ ಇವಳಿಗೆ ಪ್ರೇರಣೆಯಾಯಿತು.

ರಾಮವ್ವ ಬಂಡಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ ವೀರಮಹಿಳೆ. ಬ್ರಿಟಿಷ್ ಸೈನ್ಯದ ಮೂರು ಜನರನ್ನು ಗುಂಡಿಕ್ಕಿ ಕೊಂದ ಗಟ್ಟಿಗಿತ್ತಿ. ಅಷ್ಟೇ



ಅಲ್ಲದೆ ಆಂಗ್ಲ ಸೈನ್ಯದ ಆರು ಕುದುರೆಗಳನ್ನು ಕಡಿದುಹಾಕಿ ವೈರಿ ಪಡೆಯಲ್ಲಿ ನಡುಕ ಹುಟ್ಟಿಸಿದವಳಿವಳು.

ಬ್ರಿಟಿಷ್ ದಾಖಲಾತಿಗಳು ಇವಳನ್ನು 'ರಾಮಿ' ಎಂದು ಕರೆಯುತ್ತವೆ. ಶತ್ರು ಪಡೆಯೂ ಇವಳ ಶೌರ್ಯವನ್ನು ಮೆಚ್ಚುವಂತೆ ಅಪ್ರತಿಮ ಪರಾಕ್ರಮವನ್ನು ಇವಳು ರಣರಂಗದಲ್ಲಿ ಪ್ರದರ್ಶಿಸುತ್ತಾಳೆ.

ಇವಳೊಂದಿಗೆ ಹನಮವ್ವ, ಲಗಮವ್ವ ಎಂಬ ಮಹಿಳೆಯರು ಹಲಗಲಿಯ ಹೋರಾಟದಲ್ಲಿ ಸಕ್ರಿಯವಾಗಿ ಹೋರಾಟಕ್ಕಿಳಿದದ್ದು ಉಲ್ಲೇಖಗೊಳ್ಳುತ್ತದೆ. ಆದರೆ ಅವರ ಬಗ್ಗೆ ವಿಶೇಷ ಮಾಹಿತಿಗಳೇನು ದೊರೆಯದಿರುವದು ವಿಪರ್ಯಾಸ.

❑

## ೬. ಶೂರರ ನೆಲೆವೀಡು ಹಲಗಲಿ

ಹಲಗಲಿ ಮುಂಚಿನಿಂದಲೂ ಶೂರತನಕ್ಕೆ ಸ್ವಾಭಿಮಾನಕ್ಕೆ ಛಲಕ್ಕೆ ಹೆಸರುವಾಸಿಯಾದ ಊರು. ಇಲ್ಲಿನ ಜನ ಮುಂಚಿನಿಂದಲೂ ಶೌರ್ಯಕ್ಕೆ ಹೆಸರುವಾಸಿಯಾದವರು. ಅವರಲ್ಲಿ ಉಲ್ಲೇಖಿಸಲೇ ಬೇಕಾದ ಪ್ರಮುಖರೆಂದರೆ ಕರಿತಂದ ಕರಿಯಪ್ಪ ಮತ್ತು ಚಿರತೆಯೊಂದಿಗೆ ಕಾದಾಡಿದ ಸಿದ್ದವ್ವ.

**ಕರಿತಂದ ಕರಿಯಪ್ಪ :**

ಹಲಗಲಿಯ ದೊಡ್ಡ ಕೆರೆಯ ದಂಡೆಯ ಮೇಲೆ ಕರಿಯಪ್ಪನ ಗುಡಿಯಿದೆ. ಹಲಗಲಿ ಬಂಡಾಯದ ಸಂದರ್ಭದಲ್ಲಿ ಈ ಜಾಗ ಮದ್ದಿನ ಮನೆಯಾಗಿತ್ತೆಂದು ಹೇಳಲಾಗುತ್ತದೆ. ಹಲಗಲಿ ಬಂಡಾಯದವರ ಕಾರಸ್ಥಾನದ ಮೂಲ ಕೇಂದ್ರ ಇದೇ ಆಗಿತ್ತು ಎಂಬುದು ಮಹತ್ವದ ಅಂಶವಾಗಿದೆ. ಈ ಕರಿಯಪ್ಪನ ಗುಡಿಯ ಸುತ್ತ ರೋಚಕ ಕಥೆಯೊಂದನ್ನು ಹಲಗಲಿಯ ಜನ ಹೇಳುತ್ತಾರೆ.

ಹಲಗಲಿಯಲ್ಲಿ ಕರಿಯಪ್ಪ ಎಂಬ ವ್ಯಕ್ತಿ ಇದ್ದ. ಇವನು ಕಾರ ಹುಣ್ಣಿಮೆಯ ಕರಿಯ ದಿನ ತಲೆ ಕೂದಲು ತೆಗೆಸಿಕೊಂಡು ಮನೆಗೆ ಬಂದ. ಕೂದಲು ಕತ್ತರಿಸಿಕೊಂಡು ಒಮ್ಮೆಲೆ ಮನೆಯೊಳಗೆ ಆ ವ್ಯಕ್ತಿ ಬರುವಂತಿಲ್ಲ. ಯಾರಾದರೊಬ್ಬರು ಅವರಿಗೆ ನೀರು ಹಾಕಿದಮೇಲೆ ಅವರು ಮಡಿಯಾಗಿ ಮನೆಯೊಳಗೆ ಪ್ರವೇಶಿಸುವುದು ಉತ್ತರಕರ್ನಾಟಕದ ರೂಢಿ. ಅಂತೆಯೇ ಅವನು ಬಾಗಿಲ ಹೊರಗೆ ನಿಂತು ಬೇಗ ನೀರು ತನ್ನಿರೆಂದು ಅವಸರಿಸತೊಡಗಿದ. ಮನೆಯಲ್ಲಿನ ಹೆಣ್ಣುಮಕ್ಕಳು ಯಾವು ಯಾವುದೋ ಕೆಲಸದಲ್ಲಿ ತೊಡಗಿಸಿಕೊಂಡಿದ್ದರಿಂದ ಅವರು ನೀರು ತರುವುದು ತಡವಾಯಿತು. ತಡವಾದಷ್ಟೂ ಅವನು ಅವಸರಿಸತೊಡಗಿದ. ಸ್ವಲ್ಪ ಹೊತ್ತಿನ ನಂತರ ಮನೆಯೊಳಗಿಂದ ನೀರು ತಂದ ಮಹಿಳೆ ಕರಿಯಪ್ಪನಿಗೆ "ಏಳೂರ ಕರಿ ತಂದಂಗ ಎಷ್ಟ ಅವಸರ ಮಾಡ್ತಿ" ಎಂದು ಕರಿಯಪ್ಪನನ್ನು ಮೂದಲಿಸುತ್ತಾಳೆ. ಇದು ಕರಿಯಪ್ಪನ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಂತಾಗುತ್ತದೆ. ಆಗಲೇ ಅವನು ಏಳೂರಿನ ಕರಿ ತಂದೇ ಮನೆಗೆ ಬರೋದಾಗಿ ಪ್ರಮಾಣಮಾಡಿ ಅಲ್ಲಿಂದ ಹೊರಟು ಹೋಗುತ್ತಾನೆ.

ಮಾಡಿದ ಪ್ರತಿಜ್ಞೆಯಂತೆ ಕರಿಯಪ್ಪ ಸುತ್ತಲಿನ ಏಳು ಹಳ್ಳಿಗಳ ಕರಿ ಹರಿದುಕೊಂಡೇ ಬಂದ. ಕರಿ ಹರಿಯುವುದು ಎಂದರೆ ಕಾರಹುಣ್ಣಿಮೆಯಲ್ಲಿ ಉತ್ತರ ಕರ್ನಾಟಕದಲ್ಲಿ ಕೃಷಿಕರು ವರ್ಷದ ಬೆಳೆಗಳ ಭವಿಷ್ಯ ತಿಳಿಯಲು ಏರ್ಪಡಿಸಿಕೊಂಡ ಒಂದು ಸಂಪ್ರದಾಯ. ಗ್ರಾಮದ ಅಗಸಿ ಬಾಗಿಲಿನಿಂದ ಬಿಳಿ ಮತ್ತು ಕರಿಯ ಅಥವಾ ಕೆಂದು ಎತ್ತು ಓಡಿಸುತ್ತಾರೆ. ಕರಿ ಎತ್ತು ಮುಂದೆ ಬಂದರೆ ಮುಂಗಾರಿ ಬೆಳೆ, ಬಿಳಿ ಎತ್ತು ಮುಂದೆ ಬಂದರೆ ಹಿಂಗಾರಿ ಫಸಲು ಚೆನ್ನಾಗಿ ಬರುವುದೆಂಬ ನಂಬಿಕೆ ಉತ್ತರ ಕರ್ನಾಟಕದ ಭಾಗದಲ್ಲಿದೆ. ಅದಕ್ಕೆ ಕರಿ ಹರಿಯುವದು ಎನ್ನುತ್ತಾರೆ. ಹೀಗೆ ಕರಿ ಹರಿಯಲು ಓಡಲು ಬಿಟ್ಟ ಎತ್ತಿನ ಬಾಲವನ್ನು ಬೇರೆ ಊರಿನ ಯಾರಾದರೂ ಕತ್ತರಿಸಿದರೆ ಅದು ಆ ಎತ್ತಿನ ಊರವರಿಗೆ ಅವಮಾನದ ಸಂಗತಿ. ಅಷ್ಟೇ ಅಲ್ಲ ಮುಂದಿನ ವರ್ಷದಿಂದ ಆ ಊರಲ್ಲಿ ಕರಿ ಹರಿಯುವಂತಿಲ್ಲ, ಇದು ಸಂಪ್ರದಾಯ.

ಹೀಗೆ ಕರಿ ಹರಿದುಕೊಂಡು ಓಡುತ್ತಿದ್ದ ಕರಿಯಪ್ಪನ ಹಿಂದೆ ಸೇಡು ತೀರಿಸಿಕೊಳ್ಳಬೇಕೆಂದು ಏಳೂರಿನ ಜನ ಬೆನ್ನು ಹತ್ತುತ್ತಾರೆ. ಕರಿಯಪ್ಪ ಹಲಗಲಿಯ ಅಗಸಿ ಬಾಗಿಲಿಗೆ ಬಂದು ತಲುಪಿದ. ಆಗ ಅಗಸಿ ಬಾಗಿಲು ಹಾಕಿತ್ತು. ಮಗ್ಗುಲಿನ ಕಿಟಕಿಯಿಂದಲೇ ಕರಿಯಪ್ಪ ತನ್ನ ಊರನ್ನು ಪ್ರವೇಶಿಸಬೇಕು. ಆದರೆ ತನ್ನ ಬೆನ್ನು ಹತ್ತಿದವರಿಗೆ ಬೆನ್ನು ತೋರಿಸಿದಂತಾಗುತ್ತದೆಂದು ಹಾಗಾಗಬಾರದೆಂದು ಜನರಿಗೆದುರಾಗಿ ಆ ಕಿಟಕಿಯನ್ನು ಪ್ರವೇಶಿಸತೊಡಗಿದ. ಅಷ್ಟರಲ್ಲಿ ಬೆನ್ನುಹತ್ತಿದವರು ಬಂದು ಇವನ ರುಂಡವನ್ನು ಕಡಿದರು. ಏಳೂರವರು ಸೇರಿ ರುಂಡವನ್ನು ಒಯ್ದು ಮೆಳ್ಳಿಗೇರಿ ಕೆರೆಯ ದಡದಲ್ಲಿ ರುಂಡವನ್ನಿಟ್ಟು ವಿಶ್ರಾಂತಿ ಪಡೆಯುತ್ತಾರೆ. ಆಗ ರುಂಡ ಅವರು ಇಟ್ಟಲ್ಲೇ ಬೇರು ಬಿಟ್ಟಿತಂತೆ. ಎತ್ತು ಕಟ್ಟಿ ಜಗ್ಗಿಸಿದರೂ ಆ ರುಂಡ ಮೇಲೇಳಲಿಲ್ಲ. ಈಗಲೂ ಮೆಳ್ಳಿಗೇರಿಯಲ್ಲಿ ಕರಿಯಪ್ಪನ ರುಂಡವನ್ನು ತೋರಿಸುತ್ತಾರೆ. ಮೆಳ್ಳಿಗೇರಿ ಹಲಗಲಿಯಿಂದ ಆರು ಕಿಲೋಮೀಟರ್ ಅಂತರದಲ್ಲಿದೆ. ಆದರೆ ಕರಿಯಪ್ಪನ ಗುಡಿ ಇರುವದು ಗುಡ್ಡದಲ್ಲಿ.

ಹೀಗೆ ಹಲಗಲಿಯ ಜನ ಶೂರತನಕ್ಕೆ ಸದಾ ಹೆಸರುವಾಸಿಯಾದವರು. ಅಪಮಾನವನ್ನು ಸಹಿಸದ, ಹಿಡಿದ ಕೆಲಸವನ್ನು ಎಷ್ಟೇ ಕಷ್ಟವಾದರೂ ಬಿಡದೇ ಸಾಧಿಸುವ ಸ್ವಾಭಿಮಾನಿಗಳು ಎಂಬುದನ್ನು ಹಲಗಲಿಯ ಜನ ಮತ್ತೆ ಮತ್ತೆ ಸಾಬೀತುಗೊಳಿಸಿದ್ದಾರೆ.

**ಚಿರತೆಯೊಂದಿಗೆ ಕಾದಾಡಿದ ಸಿದ್ದವ್ವ :**

ಹಲಗಲಿ ಹೋರಾಟಕ್ಕೆ ಹೆಸರುವಾಸಿಯಾದ ಊರು. ಈ ಊರಿನ ಪುರುಷರಷ್ಟೇ ಅಲ್ಲ ಸ್ತ್ರೀಯರೂ ಸಹ ಕಲಿಗಳಾಗಿದ್ದರೆನ್ನುವದನ್ನು ಹಲಗಲಿ ಸಾರುತ್ತದೆ. ಬಂಡಾಯದಲ್ಲಿ ಪುರುಷರಿಗೆ ಹೆಗಲೆಣೆಯಾಗಿ ಹೋರಾಡಿದ ಮಹಿಳೆಯರು ಚರಿತ್ರೆಯಲ್ಲಿ ಅಜರಾಮರರಾಗಿದ್ದಾರೆ. ಅಂಥ ಶೂರರ ಸಾಲಿಗೆ ಸೇರುವ ಹಲಗಲಿಯ ಮತ್ತೊಬ್ಬ ಮಹಿಳೆ ಎಂದರೆ ಸಿದ್ದವ್ವ ಬಾಲಪ್ಪ ತುಳಸಿಗೇರಿ. ಚಿರತೆಯೊಂದಿಗೆ ಹೋರಾಡಿ ಗೆದ್ದ ರೋಚಕ ಕಥೆ ಇವಳದು.

ಹಲಗಲಿಯ ಸುತ್ತಮುತ್ತಲು ಹೇರಳವಾಗಿ ಅಂಟು ದೊರೆಯುತ್ತದೆ. ಹಾಗಾಗಿ ಅಂಟು ಬಿಡಿಸುವ ವೃತ್ತಿಯನ್ನು ಅವಲಂಬಿಸಿದ ಕುಟುಂಬಗಳು ಈ ಭಾಗದಲ್ಲಿ ಸಾಕಷ್ಟಿವೆ. ಅಂಥ ಕುಟುಂಬದಲ್ಲಿ ಸಿದ್ದವ್ವನ ಕುಟುಂಬವೂ ಒಂದು. ಸುಮಾರು ಮೂವತ್ತು ವರ್ಷ ಏರು ಹರೆಯದ ಹೆಣ್ಣು ಸಿದ್ದವ್ವ. ಎತ್ತರದ ನಿಲುವನ್ನು ಸಾಮರ್ಥ್ಯವನ್ನು ಹೊಂದಿದ ಕಟ್ಟು ಮಸ್ತಾದ ದೇಹ ದಾರ್ಢ್ಯತೆಯನ್ನು ಹೊಂದಿದ್ದಳು. ಒಂದು ದಿನ ಸಿದ್ದವ್ವ ಅಂಟು ಬಿಡಿಸಲು ಕಾಡಿನ ಮಧ್ಯಕ್ಕೆ ಹೋಗುತ್ತಾಳೆ. ಒಂದು ಜಾಗದಲ್ಲಿ ಚಿರತೆ ಮಲಗಿತ್ತು. ಅದರ ಪಕ್ಕದಲ್ಲೇ ಹೇರಳವಾದ ಅಂಟಿತ್ತು. ಅದನ್ನು ಗಮನಿಸಿದ ಸಿದ್ದವ್ವ ಸದ್ದಾಗದಂತೆ ಜಾಗ್ರತೆವಹಿಸಿ ಅಂಟನ್ನು ಬಿಡಿಸಿಕೊಂಡಳು. ಅಂಟು ಬಿಡಿಸಿಕೊಂಡು ಮರಳುವಾಗ ಸದ್ದಾಗಿ ಚಿರತೆ ಎಚ್ಚರಗೊಂಡಿತು. ಕ್ಷಣಮಾತ್ರದಲ್ಲಿ ಚಿರತೆ ಸಿದ್ದವ್ವನ ಮೈಮೇಲೆ ಎಗರಿತು. ಸಿದ್ದವ್ವ ಎದೆಗುಂದದೇ ಆ ಕ್ಷಣದಲ್ಲೇ ಚಿರತೆಯನ್ನು ಎದುರಿಸಲು ಸಿದ್ಧಳಾದಳು. ಚಿರತೆ ಅವಳ ತಲೆಗೆ ಬಾಯಿ ಹಾಕಲು ಅವಳ ತುರುಬು ಅದರ ಬಾಯಿಗೆ ಸಿಕ್ಕಿತು. ಸಿದ್ದವ್ವ ಚಿರತೆಯೊಂದಿಗೆ ಹೋರಾಟಕ್ಕಿಳಿದಳು. ನಿಧಾನವಾಗಿ ಅವಳಿಗೆ ಚಿರತೆ ಇನ್ನು ತನ್ನನ್ನು ಬಿಡುವದಿಲ್ಲವೆಂದು ಅನಿಸತೊಡಗಿತು. ಅದಕ್ಕೆ ಹೇಗಾದರೂ ಮಾಡಿ ಅದನ್ನು ಹೆದರಿಸಬೇಕೆಂದು ನಿರ್ಧರಿಸಿದಳು. ಮೊದಲು ಚಿರತೆಯನ್ನು ಬಿಗಿಯಾಗಿ ಎದೆಗವಚಿಕೊಂಡು ಹೆಗಲ ಮೇಲೆತ್ತಿಕೊಂಡು ಮೇಲಿಂದ ಹಿಂದಕ್ಕೆ



ಧೊಪ್ಪನೆ ಚಿರತೆಯನ್ನು ಒಗೆದಳು. ಚಿರತೆ ಬಿದ್ದ ತಕ್ಷಣ ಮತ್ತೆ ಅವಳ ಮೇಲೆ ದಾಳಿ ಮಾಡದೇ ಕಾಡಿನಲ್ಲಿ ಓಡಿತು. ಹೀಗೆ ಸಿದ್ದವ್ವ ಧೈರ್ಯದಿಂದ ಹೋರಾಡಿದ್ದರಿಂದಲೇ ಅದು ಅವಳನ್ನು ಬಿಟ್ಟೋಡಿತು. ಈಕೆ ಸುಮಾರು ಎಪ್ಪತ್ತು ವರ್ಷ ತುಂಬು ಜೀವನ ನಡೆಸಿ ೧೯೮೪ರ ಆಸುಪಾಸಿನಲ್ಲಿ ತೀರಿಕೊಂಡಳು.

ಚಿರತೆಯೊಂದಿಗೆ ಹೋರಾಡುವಾಗ ಇವಳಿಗೆ ತಲೆ ತುಂಬ ಗುಬ್ಬಚಿಗಳಾಗಿದ್ದವು. ಚಿರತೆಯ ಉಗುರು ಚುಚ್ಚಿ ತಲೆ ತುಂಬಾ ಗುಳ್ಳೆಗಳಾಗಿದ್ದವು. ಹೊಡೆತ ಬಿದ್ದ ತಲೆಯ ಭಾಗಗಳಲ್ಲಿ ಕೂದಲು ಹೋಗಿದ್ದವು. ಹೀಗಾಗಿ ಈ ಘಟನೆಯ ತರುವಾಯ ಸಿದ್ದವ್ವ ಸದಾ ತಲೆ ಕಟ್ಟಿಕೊಂಡು ಇರುತ್ತಿದ್ದಳು. ಈಗಲೂ ಈ ವಿಷಯವನ್ನು ಸಿದ್ದವನ ಮನೆಯಲ್ಲಿ ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇಂಥ ವೀರರ ನೆಲ ಹಲಗಲಿ. ಚಿರತೆಯೊಂದಿಗೆ ಹೋರಾಡಿದ ಸಿದ್ದವ್ವ ಕಾಲಘಟ್ಟದಲ್ಲಿ ಹಲಗಲಿ ಬಂಡಾಯದ ನಂತರದವಳು. ಈ ರೀತಿಯ ವೀರ ಶೂರರು ಹಲಗಲಿಯ ಖ್ಯಾತಿಯನ್ನು ಮತ್ತೆ ಮತ್ತೆ ಈವರೆಗೆ ಬೆಳಗುತ್ತಲೇ ಇದ್ದಾರೆ. ಕಾಲ ಬದಲಾದಂತೆ ಶೌರ್ಯದ ವ್ಯಾಖ್ಯಾನ ಬದಲಾಗಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಹಲಗಲಿಯ ಜನರೂ ಬದಲಾಗಿದ್ದಾರೆ. ಅದರೆ ಅವರಲ್ಲಿನ ಸ್ವಾಭಿಮಾನ ಛಲ ಬದಲಾಗದೇ ಸಾಧನೆಗಳನ್ನು ಮಾಡುತ್ತಲೇ ಬಂದಿದ್ದಾರೆ. ಇದು ನಾಡವರಿಗೆ ಆಶ್ಚರ್ಯದ ಸಂಗತಿಯಾದರೆ ಹಲಗಲಿಯ ಜನಕ್ಕೆ ಅಭಿಮಾನದ ಸಂಗತಿಯಾಗಿದೆ.

ಇಡೀ ಹಲಗಲಿಯ ಕುರಿತು ಸಾಕಷ್ಟು ವಿಸ್ತೃತ ಅಧ್ಯಯನಗಳು ನಡೆದಿವೆ. ಇಂಥ ಅಧ್ಯಯನ ನಡೆಸಿದವರಲ್ಲಿ ಪ್ರಮುಖರು ಡಾ. ಶ್ರೀರಾಮ ಇಟ್ಟಣ್ಣವರ ಹಾಗೂ ವೀರೇಂದ್ರ ಶೀಲವಂತರವರು. ಇವರ ಕೃತಿಗಳು ಹಲಗಲಿಯನ್ನು ಮುಂದಿನ ತಲೆಮಾರುಗಳಿಗೆ ತಲುಪಿಸುವ ಕಾರ್ಯ ಮಾಡಿರುವುದು ನಿಜಕ್ಕೂ ಶ್ಲಾಘನೀಯವಾದುದು.

❑

## ೭. ಸಮಾರೋಪ

ಭಾರತದುದ್ದಕ್ಕೂ ಲಕ್ಷಾಂತರ ಹಳ್ಳಿ ಪಟ್ಟಣಗಳಿವೆ. ಒಂದೊಂದು ಕಾರಣಕ್ಕಾಗಿ ಇಲ್ಲಿಯ ಹಲವು ಗ್ರಾಮಗಳು ಪ್ರಸಿದ್ಧಿ ಪಡೆದಿವೆ. ಕೆಲವು ತೀರ್ಥಕ್ಷೇತ್ರಗಳಾಗಿ, ಕೆಲವು ಆ ಗ್ರಾಮಗಳಲ್ಲಿ ಆಗಿಹೋದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಕ್ರೀಡಾ ಮುಂತಾದ ಕ್ಷೇತ್ರ ವ್ಯಕ್ತಿಗಳಿಂದ, ಕೆಲವು ಇತಿಹಾಸಕ್ಕೆ ಕೈಗೂಡಿಸಿದ್ದರಿಂದ ಢಾಳಾಗಿ ಗುರುತಿಸಿಕೊಂಡಿವೆ. ಹಲಗಲಿ ಪ್ರಸಿದ್ಧವಾದುದು ಬ್ರಿಟಿಷರ ವಿರುದ್ಧ ಬಂಡೆದ್ದು ಹೋರಾಡಿದ ವ್ಯಕ್ತಿಗಳಿಂದ. ಬ್ರಿಟಿಷರು ತಮ್ಮ ರಕ್ಷಣೆಗಾಗಿ ತಾವೇ ಮಾಡಿಕೊಂಡ ನಿಶಸ್ತ್ರೀಕರಣ ಕಾಯ್ದೆ ತಮಗೇ ಮುಳುವಾಯಿತು. ಆತ್ಮಾಭಿಮಾನ ದೇಶಾಭಿಮಾನವಾಗಿ ಪರಿವರ್ತನೆಗೊಂಡದ್ದು ಹಲಗಲಿ ಇತಿಹಾಸದ ವಿಶೇಷತೆಯಾಗಿದೆ. ನಮ್ಮ ಜನರೇ ಕೆಚ್ಚು ಮತ್ತು ಬ್ರಿಟಿಷರ ನಿರ್ದಾಕ್ಷಿಣ್ಯತೆ ಇವೆರಡನ್ನು ಹಲಗಲಿ ಬಂಡಾಯ ಸಾಕ್ಷೀಕರಿಸಿದ್ದನ್ನು ಇಲ್ಲಿ ಪ್ರಧಾನವಾಗಿ ಗುರುತಿಸಲಾಗಿದೆ.

ರಾಷ್ಟ್ರಮಟ್ಟದ ಅನೇಕ ಮುಂದಾಳುಗಳು ಸ್ವಾತಂತ್ರ್ಯ ಹೋರಾಟಗಳಿಗೆ ಸ್ಫೂರ್ತಿಯಾದರು. ಅವರ ನೀಲನಕ್ಷೆಯಿಂದ ಇವರೆಲ್ಲ ಮುಂದುವರೆದರು ಎಂಬುದನ್ನು ಇತಿಹಾಸ ಹೇಳುತ್ತದೆ. ಆದರೆ ಭಾರತದ ಹಳ್ಳಿಗಾಡಿನ ಅನೇಕ ಜನ ಸ್ವಯಂ ಸ್ಫೂರ್ತಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಬ್ರಿಟಿಷರಿಗೆ ಸಿಂಹಸ್ವಪ್ನವಾದದ್ದು ಈಗ ಇತಿಹಾಸ. ಸ್ಥಳೀಯ ಮುಂದಾಳುಗಳೇ ಒಬ್ಬೊಬ್ಬರು ನೇತೃತ್ವವಹಿಸಿ ಜನರನ್ನು ಹುರಿದುಂಬಿಸಿ ಹೋರಾಟದ ಕಣಕ್ಕೆ ತಂದರು ಎಂಬುದು ಗಮನಾರ್ಹ ಅಂಶವೆನಿಸುತ್ತದೆ. ಹಲಗಲಿಯ ಜಡಗಾ ಬಾಲರ ಎದೆಯಲ್ಲಿ ಹೊತ್ತಿದ್ದ ಕಿಚ್ಚು ಹೇಗೆ ಇತಿಹಾಸವನ್ನು ಸೃಷ್ಟಿಸಿತು, ಕೊನೆಗೆ ರಾಮಿಯಂಥ ಹೆಣ್ಣುಮಗಳೂ ಹೋರಾಟದಲ್ಲಿ ಮುನ್ನುಗ್ಗಿ ಹೇಗೆ ಇತಿಹಾಸದ ಭಾಗವಾದಳು ಎಂಬುದನ್ನಿಲ್ಲಿ ವಿವರಿಸಲಾಗಿದೆ.

ನಮ್ಮ ನಾಡವರ ಕೆಚ್ಚು ದಾಖಲುಗೊಳ್ಳಬೇಕು. ಇಂತಹ ಬರಹಗಳು ಕೇವಲ ಅಕ್ಷರವಾಗಿ ಉಳಿಯುವುದಿಲ್ಲ, ಅವು ಭವಿಷ್ಯದಲ್ಲಿ ನಾಡನ್ನು ಬೆಳೆಸುವ ಯುವಜನಕ್ಕೆ ಸ್ಫೂರ್ತಿಯಾಗುತ್ತವೆ. ಆದರೆ ಇಂಥದೊಂದು ಹುಮ್ಮಸ್ಸಿನಲ್ಲಿ ಇತಿಹಾಸ ಅತಿರಂಜಿತವಾಗಬಾರದು. ಇರುವ ಸತ್ಯವನ್ನು ಮಾತ್ರ ಇತಿಹಾಸ ಹೇಳಬೇಕು ಎಂಬ ನಂಬಿಕೆಯ ಅಡಿಯಲ್ಲಿ ಯಾವ ಘಟನೆಯೂ ಉತ್ಪ್ರೇಕ್ಷೆಗೊಳ್ಳದಂತೆ ಇಲ್ಲಿ ಎಚ್ಚರಿಕೆವಹಿಸಲಾಗಿದೆ. ಈ ಹಿಂದೆ ಹಲಗಲಿ ಬಂಡಾಯದ ಕುರಿತು ಬರೆದವರಾರೂ ವಿಷಯವನ್ನು ಉತ್ಪ್ರೇಕ್ಷೆಗೊಳಿಸಲು ಹೋಗಿಲ್ಲ ಎಂಬುದು ಗಮನಾರ್ಹ ಸಂಗತಿ. ಇಂತಹ ಆಕರಗಳನ್ನು ಬಳಸಿಕೊಂಡಿರುವ ಇಲ್ಲಿಯ ವಿವರಣೆಗಳು ವಸ್ತುನಿಷ್ಠವಾಗಿವೆ ಎಂದು ನಂಬಲಾಗಿದೆ.

ಹಲಗಲಿ ಬೇಡರ ಬಂಡಾಯ ಕೇವಲ ಹಲಗಲಿಗಷ್ಟೇ ಅಭಿಮಾನವಾಗಿಲ್ಲ. ಇಡೀ ದೇಶವೇ ಅಭಿಮಾನ ತಾಳುವ ವಿಶೇಷತೆ ಇಲ್ಲಿದೆ ಎಂಬುದನ್ನು ಮರೆಯಬಾರದು. ದುಡಿಯುವ ವರ್ಗವೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತನ್ನ ಅಸ್ಮಿತೆಯನ್ನು ಈ ದೆಸೆಯಲ್ಲಿ ಗುರುತಿಸಿಕೊಂಡಿರುವುದು ಮುಖ್ಯ ಮಜಲು ಎನ್ನಿಸುತ್ತದೆ. ಭಾರತದ ಉದ್ದಕ್ಕೂ ಚಾಚಿಕೊಂಡಿರುವ ಇಂತಹ ಲಕ್ಷಾಂತರ ಹಳ್ಳಿಗಳು ಗುರುತಿಸಲ್ಪಡಬೇಕು ಎಂಬ ಆಶಯ ಇಂತಹ ಯೋಜನೆಗಳಿಂದ ಸಾಕಾರಗೊಳ್ಳುತ್ತದೆ.

ಇತಿಹಾಸದ ಘಟನಾವಳಿಗಳನ್ನು ಇತಿಹಾಸಕಾರರು ಬರೆದಂತೆ ಶಿಷ್ಟ ವಲಯದ ಸೃಜನ ಬರಹಗಾರರು ಅವುಗಳನ್ನು ಕಥೆ–ಕಾದಂಬರಿ–ನಾಟಕವಾಗಿಸಿದರು. ಅಂತೆಯೇ ಜನಪದ ಸಾಹಿತಿಗಳು ಇತಿಹಾಸಕ್ಕೆ ಕುರುಡಾಗಿ ಉಳಿಯಲಿಲ್ಲ. ಅವರು ಬರೆದ ಎಷ್ಟು ಚಾರಿತ್ರಿಕ ಹಾಡುಗಳು ಅಭಿಮಾನಕ್ಕಾಗಿ ಇಂದಿಗೂ ಪ್ರಸ್ತುತವೆನಿಸುತ್ತವೆ. ಅನೇಕ ಲಾವಣಿ ತ್ರಿಪದಿಗಳಲ್ಲಿ ಇತಿಹಾಸ ಹುದುಗಿಕೊಂಡಿದೆ. ಅವು ಮುಂದಿನ ಬರಹಗಾರರಿಗೆ ಸಹಾಯಕವಾಗಿ ನಿಲ್ಲುತ್ತವೆ. ಈ ಕಾರಣದಿಂದಲೇ ಹಲಗಲಿ ಬಂಡಾಯ ಕುರಿತಾದ ಕುರ್ತುಕೋಟಿ ಕಲ್ಮೇಶ್ ಅಂಕಿತದ ಒಂದು ಲಾವಣಿ ಮತ್ತು ಆರ್. ಸಿ. ಮುದ್ದೇಬಿಹಾಳ ಅವರ ತ್ರಿಪದಿ ಗುಚ್ಛವನ್ನು ಅನುಬಂಧವಾಗಿ ಸ್ವೀಕರಿಸಲಾಗಿದೆ. ಸಹಾಯಕ ಸಾಹಿತ್ಯವು ಇಲ್ಲಿಯ ಎರಡನೆಯ ಅನುಬಂಧವಾಗಿದೆ.

## ಅನುಬಂಧ – ೧
## ಲಾವಣಿ

### ಪಲ್ಲ

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
ಶಿತ್ತಿನ ಮಂದಿ ಭಂಟರ ಹಲಗಲ ಮುಟ್ಟಲಿಲ್ಲ ದಡಕ

### ೧ನೆಯ ನುಡಿ

ವಿಲಾತಿಯಿಂದ ಹುಕುಮ ಕಳವಿದರ ಕುಂಪಣಿ ಸರಕಾರಾ
ಎಲ್ಲಾ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ

ಕತಗತಿ ಕಟಾರಿ ಕೈ ಚೂರಿ ಚಾಕು ಗುರ್ದಿ ಸುರಾಯಿ ಚಕ್ರಾ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ

ಪಟಾತ ಪಿಸ್ತುಲ ಕರುಲಿ ತೇಗಾ ಚಾಪಗೊಡ್ಲಿಶಸ್ತ್ರಾ
ತೋಪು ತುಬಾಕಿಹೊಡವು ಮದ್ದ ಗುಂಡ ಬಿಡಬ್ಯಾಡರಿ ಚೂರಾ

ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ ॥ಚಾಲ॥

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗರ ಸಾರಿದರ ಮುಂದು

ಶೂರ ಸಿಪಾಯಿಜನರ ತಾವು ತಿಳಿದು
ಅಳತಾರು ಕಣ್ಣಿಗೆ ನೀರ್ ತಂದು ॥ಏರ॥

ಬಹಳ ಚಿಂತಿಯಾಗಿ ದುಃಖದಿಂದ ಅವರು ಬಿದ್ದಾರಣ್ಣ ನೆಲಕ

### ೨ನೆಯ ನುಡಿ

ಕೇಳುತ ಹುಕುಮಾ ಕೇಳವರ ತಂದ ತಂದ ಕೊಟ್ಟಾರ ಅವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟಾರ ಒಳಗ

ಸಾಲ ಸಮುದ ಮಾಡಿ ದನ ಕರ ಮಾರಿ ತಂದಿನ್ನಿ ಹಬ್ಬದಾಗ
ನೋಡ ನೋಡ ಹ್ಯಾಂಗ ಕೊಡೂನಂತ ಹುಗದ ಇಟ್ಟಾರನೆಲದಾಗ

ಶೂರ ಚಿಟೆಗಾರು ಚಾಯಿತ ಸಾಹೇಬ ಬಂದಾರ ಆವಾಗ
ಸಂದಿಗೊಂದಿ ಒಂದೂ ಉಳಿಯದಂಗ ಹೊಕ್ಕ ಹುಡಿಕ್ಯಾರ ಮನಿಯಾಗ

ತಪ್ಪೀತ ಉಪಾಯ ಇನ್ನ ಮಾತರ ಮಾಡುನಂತಾರ ಹ್ಯಾಂಗ
ಒಬ್ಬರಕೊಬ್ಬರ ಚ್ಯಾಡ ಚ್ಯಾಡ ಹೇಳತಾರ ವರಮ ಸಾಧಿಸಿದಾಂಗ
॥ಚ್ಯಾಲ॥

ಜ್ಯಾಡಸಿ ಹ್ವಾದವೊ ಎಲ್ಲಾ
ನಾಡೊಳಗ ಏನೂ ಉಳೀಲಿಲ್ಲಾ

ಅಜ್ಜ ಮುತ್ತೇರ ಹಿಡುವ ಪಿಸ್ತೂಲ
ಕಸದ ಒದರ ಕತ್ತಿಯ ಢಾಲಾ

ಕವಚ ಬೆಳ್ಳಿಯ ಮಕಮಾಲಾ
ಹಿಡಕಿವ ಹೋದವು ಎಲ್ಲಾ ॥ಏರ॥

ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

**೩ನೆಯ ನುಡಿ**

ಹಲ್ಲ ಕಿತ್ತಿದಾ ಹಾವಿನ ಪರಿಯು ನಮಗ ಆದಿತಲ್ಲಾ
ರಂಡಿ ಮುಸುಕ ಹಾಕಿ ತಿರಗಿದರ ನಮ ಮಾನ ಉಳಿಯುದಿಲ್ಲಾ

ಮಗ್ಗಲದಾಗಿನ ಹೇಣತಿ ಕೊಟ್ಟಂಗ ಆತಿ ಹೇಡಿ ಆದೇವಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತಲ್ಲಾ

ಸಾವಕಾರು ನಮ್ಮ ಜೀವ ಹೋದಿತಂತ ಚಿಂತಿ ಮಾಡ್ಯಾರಲ್ಲಾ
ಹಗಲಿ ಮನಿ ಹೊಕ್ಕ ಹಣಾ ಓದರ ಕೇಳವರ ಯಾರಿಲ್ಲಾ

ಪುಂಡ ಪಾಳೇಗಾರ ಪಚ್ಛ್ಯಾ ವಜೀರರು ಪಂತ ಹಿಡಿಯಲಿಲ್ಲಾ
ದಂಡಿನ ಆಳುವ ಘೋರಿ ದೌಲತರ ಅಂಜಿ ಕುಳಿತರಲ್ಲಾ ॥ಚ್ಯಾಲ॥

ದೇವರ ತಂದ ಪಡಿಪಾಟ
ಚಿಂತಿ ಹತ್ತಿ ಅದರೋ ನಷ್ಟಾ

ಅಧಿಕಾರ ಉಳಿಯಲಿಲ್ಲೆಳ್ಳಷ್ಟಾ
ಕೇಡಗಾಲ ಬಂದಿತು ಕನಿಕಷ್ಟಾ



ಹೆಂಗಸಾಗಿ ಸೀರಿಯ ಉಟ್ಟಾ
ಸೊಂಡಿ ಒಣಗಿ ಆದೀತೊ ಬೊಬ್ಬಾಟಾ

ಆದಹಾಂಗೈತಿ ಸ್ತ್ರೀಯರ ಕ್ರೀಡಾದಾಟಾ
ಭಂಟರಿಗೆ ಬಂದಿತೊ ಬಿಕ್ಕಷ್ಟಾ ॥ಏರ॥

ಪಕ್ಕಾ ಕಿತ್ತ ಪಕ್ಷಿ ಗತಿ ಅಗಿ ಚಿಂತಿ ಆದರ ಮನಕ

**೪ನೆಯ ನುಡಿ**

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜೇರಿಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತ

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದಿಂದ ಬಾರದು ನಮ್ಮ ಜೀವ ಸತ್ತೋಗುದು ಗೊತ್ತು

ಸುತ್ತಿನ ಹಳ್ಳಿ ಮತ್ತ ಧೊರಿಗಳಿಗೆ ತಿಳಶೇರ ಹಿಂಗಾತು
ಮಾಡರಿ ಜಗಳಾ ಕೂಡಿರತೇವು ಕುಮುಕಿ ಯಾವತ್ತು

ಒಳಗಿಂದೊಳಗ ವಚನ ಕೊಟ್ಟಾರೊ ಬ್ಯಾಡರ ಎಲ್ಲ ಕಲತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು ॥ಚ್ಯಾಲ॥

ದುಃಖದಿಂದ ಅವರು ಅಲ್ಲಿಗ ಹೋಗಿ
ಸಾಹೇಬಗ ಹೇಳಿದರ ಕೂಗಿ

ಕೇಳಿ ಸಾಹೇಬ ಎದ್ದ ಸಿಟ್ಟಿಗಿ
ತಿರಗಿ ಹೋದ ಆವಾಗ ಕಲಾದಗಿ

ಕರಸಿ ಕೃಷ್ಣನಾಯಕಗೌಡ ಕುಂದರಗಿ
ಕರಸ್ಯಾನ ಸಂಧಾನಕ್ಕಾಗಿ ॥ಏರ॥

### ೫ನೆಯ ನುಡಿ

ಹತಾರ ಕೊಡಲಿಕೆ ಹೆಂಗಸಾಗಿ ಬಳಿಯ ಇಟ್ಟಿಲ್ಲ ಕೈಯಾಗ
ಯಾವ ಬಂದೀರಿ ಜೀವ ಹೋದರು ಕೊಡೂದಿಲ್ಲಸುಮ್ಮನ್ಹೋಗರಿ
ಈಗ

ಅಂದ ಮಾತ ಎಲ್ಲ ಬಂದ ಹೇಳಿದಾನ ಆವಾಗ ಸಾಹೇಬ ಸಿಟ್ಟಿಲಿ
ಮುಂಗೈ ಕಟ್ಟನ ಕಡಕೊಂಡ ಹುಕುಮ ಕೊಟ್ಟಾರಾಗ

ಕುದರಿಯ ಮಂದಿ ಕೂಡಿ ಮುಟ್ಟಿತೊ ಹಲಗಲಿ ಸ್ಥಳದ ಮೇಗ
ಒಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿಮಳಿ ಸುರದಂಗ

ಹೊರಗಿನ ಮಂದಿ ಗುಂಡಹತ್ತಿ ಕೆರ ತಿರಗೆರ ಆವಾಗ
ಕಾಗದ ಬರದ ಕಳವೆರ ಬೇಗನ ದಂಡ ಬರಲ್ ಎಂತ ಹೀಂಗ
॥ಚ್ಯಾಲ॥

ದಂಡ ಬಂತ ನೋಡ ತಯಾರಾಗಿ
ಜಲದ ಮಾಡಿ ಬಂತ ಹಲಗಲಿಗಿ

ಆರ ತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುತ್ತಿಗಿ

ಗುಂಡ ಹೊಡದಾರ ವಿಪರೀತ ಸೂರಿ ಆಗಿ
ಅಂಜಿ ಓಡಾಕ ಹತ್ತಿತ ಮುಂದಾಗಿ



ಬೆನ್ನ ಹತ್ತಿ ನೋಡಿದಾರ ಇವರಾಗಿ
ಬಿದ್ದಾವ ಹೆಣಗೋಳ ಸೂರಿ ಆಗಿ ॥ಏರ॥

ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತೆತಕ

### ೬ನೆಯ ನುಡಿ

ಬೆನ್ನ ಹತ್ತಿ ತಿರಿತಿರಿವಿ ಕಡದರೊ ಏನೂ ಉಳಿಯದಾಂಗ
ನಡವಿಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್ಹಾಂಗ

ಕವಾತ ಫೈರಾ ಸುತ್ತಗಟ್ಇ ತಂಬು ನುಡಿಶ್ಯಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತೂಲ ಬಾಕ ನಡುವಿನಾಗ

ಸಿಡಿಲಿನಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತಂಗ
ನಡುಗಿತು ಬ್ಯಾಡಕಿ ಕೆಂಧೂಳ ಹರದಾಂಗ ಕಡದಾಟವು ಹ್ಯಾಂಗ

ಕೇಡಗಾಲ ಬಂದಿತ ನಡವಿ ಸಿಕ್ಕರೊ ಬಿಡಸವರ ಯಾರೀಗ
ಚಟಕಾರರು ಚಾಟಿ ಮಾಡುತ ನಡದರ ಗುಡದಾಗ ॥ಇಳವ॥

ಅಗಸಿಗಿ ಬಂದು ನಿಂತಿತು
ಹೆಬಲಕ್ ಸಾಹೇಬಂದು ತಾವು ನಿಂತು

ಹೇಳತಾರ ಬುದ್ಧಿಯ ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್ತಾ ನೀವು ಸತ್ತು ॥ಏರ॥
ಎಂಬು ಮಾತಿಗೆ ನಂಬಿಗೆ ಸಾಲದ ಹಣಮ ಬಂದ ಮುಂದಕ

### ೭ನೆಯ ನುಡಿ

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕರೊ ಇವರಾ
ಇಸವಾಸ ಘಾತಾ ಮಾಡಿ ನೆಂಬಗಿಲೆ ಮಾಡತಾರು ಫಿತುರಾ

ಮಾಸ ಮಾಡಿ ಬಲ ದೇಶ ತಗೋತರ ಮುಂದ ನಮಗ ಗೋರಾ
ಅಂದ ಹೊಡದಾರೊ ಒಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್ ಸಾಹೇಬ ಬೆಂಕಿ ಚೂರ ಆಗಿ ತಾನು ಲೂಟಿ ಮಾಡ ಅಂದ ಊರಾ
ಹುರಪಿಲೆ ಹೊಡದರ ಮಳಿ ಆದ ಹಾಂಗ ಗುಂಡ ಸುರದವು ಬರಪೂರಾ

ಹಣಮ ಹೇಳತನ ಗುಂಡ ಹೊಡದಕೆರ ಕೆಡವುನ ಅಷ್ಟು ಬಾರಾ
ಮುನ್ನೂರ ಮಂದಿಯನ್ನ ಮೇಗೆ ಬಿಟ್ಟ ಆಗ ನೋಡರಿ ಜೋರಾ
॥ಚ್ಯಾಲ॥

ಭೀಮನು ಇದರಿಗೆ ನಿಂತಾ
ಐನೂರ ಮಂದಿಗೆ ಮಲತಾ

ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ

ರಾಮನ ಕಡತಾ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಆಳಿಗೆ ಒಬ್ಬ ಮಲತಾ
ಕೂಗತಾನೊ ಕಡಿ ಕಡಿರಂತಾ ॥ಏರ॥

ನಾಲ್ಕು ಮಂದಿ ಹೆಂಗ ಕಡದ ಸತ್ತರೊ ಭಂಟರ ಅನಸೇರ ಜನಕ

**೮ನೆಯ ನುಡಿ**

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮ ಬಿದ್ದ ನೆಲಕ
ಚೀರ್ಯಾಡುತ ಜನ ಸುತ್ತಗಟ್ಟಿತೊ ಅಂಜಿಕೊಂಡ ಜೀವಕ



ಶೂರ ಒಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಏರಿ ಬರು ಕುದರಿ ಕಾಲ ಕಡದನೊ ಸ್ವಾರ ಬಿದ್ದ ನೆಲಕ

ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರ ಮಂದಿ ಶಿರಕ
ಆರ ಕುದರಿಯ ಕಡದ ಸಿಡದಳೊ ಬಾಲನ ಸೂರಾಯಕ ॥ಚ್ಯಾಲ॥

ಯಾರ ಯಾರು ಇಲ್ಲದಾದೀತು
ಊರ ಎಲ್ಲಾ ಲೂಟಿ ಆಗಿ ಹೋತು

ಮಂದಿ ಮನಿ ಹೊಕ್ಕ ಹುಡಕಿತು
ದನ ಕರಾ ಲಯಾ ಆದೀತು

ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಯಾರ ಪೂರ ಸುಟ್ಟೀತು

ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು ॥ಏರ॥

ಇಷ್ಟ ಎಲ್ಲ ಅಳವ ಅಗಿ ಹೋದಿತೊ ಮುಟ್ಟಲಿಲ್ಲ ಯಾತ ಎತಕ

**೯ನೆಯ ನುಡಿ**

ಕತ್ತಿ ಕುದರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಬಂಗಾರಾ ಹರಳಿನ ಉಂಗರಾ ಹೊನ್ನುಂಗರ ಗೋಲಾ
ಸರಗಿ ಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡವಿನ ಡಾಬಾ ನಡಕಟ್ಟು ರುಮಾಲಾ

ಕುಬಸಾ ಸೀರಿ ಹಪ್ಪಳ ಸಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಡ ಕಬ್ಬಿಣಾ ಮಸರು ಬೆಣ್ಣಿ ಹಾಲಾ

ಉಪ್ಪ ಎಣ್ಣಿ ಅರಿಷಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಾಳ ಚರಗಿ ಮಂಗಳ ಸೂತ್ರಾ ತಕೊಂಡ ಹೋದರ ಬೀಸುಕಲ್ಲಾ
॥ಇಳು॥

ಹಾಳಾಗಿ ಹೋದಿತೊ ಇಷ್ಟು
ವರ್ಣಿಸಿ ಹೇಳಲು ಎಷ್ಟು

ಎಲ್ಲ ತಗೊಂಡರೋ ಸಿಕ್ಕಷ್ಟು
ಸರ್ದ ನಿಂತರೊ ಊರಿಗಿ ಕೊಳ್ಳಿ ಕೊಟ್ಟು

ಬೂದಿ ಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು

ಕಾಣಸ್ದ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು ॥ಏರ॥

ಕುರ್ತಕೀಟಿ ಕಲ್ಮೇಶನ ದಯದಿಂದ ಹೇಳುದ ಕೇಳುದಕ

ಸಂಗ್ರಹ : ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು
ಸಂ. ಕ್ಯಾತನಹಳ್ಳಿ ರಾಮಣ್ಣ

## ಅನುಬಂಧ – ೨
## ತ್ರಿಪದಿಗಳು

ಅರಕೇರಿ ಜಾನ್ಮಟ್ಟಿ ಬಿಸನಾಳ ಕೊಪ್ಪವು
ಅರಕೇರಿ ತಾಂಡೆ ಸುತ್ತ ಮುತ್ತ । ಚೆಂದಾಗಿ
ಮೆರೆದಿತ್ತ ನಡುವೆ ಹಲಗಲಿ ॥

ಕರಿಯಪ್ಪನ ಹುಡೆಚೆಂದ ಹುಡೆಮುಂದ ಕರೆಚೆಂದ
ಊರ್ಮುಂದ ಕೋಟೆ ಬಲುಚೆಂದ । ಶೌರ್ಯದಲಿ
ಧೀರ ಬೇಡರು ಕಡುಮುಂದ ॥

ಕರಿಯಪ್ಪ ಬಡಿಗೇರ ಏಳೂರ ಕರಿತಂದು
ಕರಿಹರಿದು ಮೆರೆದು ನೀಡಿರಲು । ಊರಾಗ
ಕರಿಯಪ್ಪನ ಹುಡೆಯು ಹೆಸರಾಯ್ತು ॥

ಜಡಗಣ್ಣವರ ಜಡಗಾ ಕೊಳ್ಳಣ್ಣವರ ಬಾಲಾ
ಗಡುಸಾಗಿ ಚೆಂದ ಮೆರೆದಾರ । ಊರಾಗ
ಕಡುಗಲಿಗಳಾಗಿ ಬದುಕ್ಯಾರ ॥

ಹಲಗಲಿಯ ಬೇಡರು ಹುಲಿಗಿಂತ ಶೂರರು
ಚಲಿಸದೆ ನಿಂತು ಹೋರಾಡಿ । ಮಡಿದಿವರು
ಕುಲಹಿರಿಮೆ ಮೆರೆಸಿ ಹೋಗ್ಯಾರ ॥

ಆಂಗ್ಲರು ಬಂದಾಗ ಇವರನ್ನು ಕಂಡಾಗ
ಬಂಡಾಯ ಹೂಡಿ ನಿಂತಾರ । ಬೇಡರು
ಕಂಡಲ್ಲಿ ದಾಳಿ ಮಾಡ್ಯಾರ ॥

ಮಸ್ತಾದ ಆಳುಗಳು ಶಸ್ತ್ರಗಳನು ಹಿಡಿಕೊಂಡು
ಗಸ್ತು ತಿರುಗ್ಯಾರ ಊರೂರ । ಇದಕಂಡು
ಆಂಗ್ಲರು ಉರಿದು ನಿಂತಾರ ॥

ಕಲಾದಗಿ ಊರಿಂದ ಸೆಲೆಗೂಡಿ ಫೌಜವು
ಹಲಗಲಿಯ ಮುಂದೆ ಬಂದಿತ್ತ । ಕಾಲ್ಕೆದರಿ
ಹುಲಿಯಂಗ ಕೆರಳಿ ನಿಂತಿತ್ತ ॥

ಗುಡ್ಡದ ವಾರಿಯಲಿ ಸಡ್ಡೊಡೆದು ಬೇಡರು
ಅಡ್ಡಾಗಿ ನಿಂತು ನೋಡ್ಯಾರ । ಫೌಜವನು
ಒಡ್ಡಿನೊಳು ಅಡಗಿ ನಿಂತಾರ ॥

ಕೊಪ್ಪದ ದಾರಿಯಲಿ ಇಪ್ಪತ್ತು ಕುದುರೇರಿ
ಇತ್ತ ಬಂದಿತ್ತ ಫೌಜವು । ಮೇಲೇರಿ
ಹತ್ತಿತ್ತು ಕದನ ಜೋರಾಗಿ ॥

ಜಪ್ಪಿಸಿ ಆಂಗ್ಲರು ಗಪ್ಪನೆ ಬಂದಾರ
ಒಪ್ಪಿಸಿ ಶಸ್ತ್ರ ಕೊಡುವೆಂದು । ಕೇಳ್ಯಾರ
ಒಪ್ಪದೆ ಬೇಡರು ನಿಂತಾರ ॥

ಮಕ್ಕಳನ ಬಿಟ್ಟೇವ ಕೊಟ್ಟೇವ ಹೊಲಮನಿ
ಅಕ್ಕರೆಯ ಶಸ್ತ್ರ ಕೊಡುದಿಲ್ಲ । ನಾವಿಂದು
ಸಿಕ್ಕಲ್ಲಿ ನಿಮ್ಮ ಬಿಡುದಿಲ್ಲ ॥



ಜಡಗಾ ಬಾಲಾ ಇವರು ಗಡಿಬಿಡ್ಲೆ ಕಣಕಿಳಿದು
ಅಡಿಗಡಿಗೆ ಖಡ್ಗ ಬೀಸ್ಯಾಡಿ । ಕುಣಿಕುಣಿದು
ಗಡುತರ ಡಾಲ ಹಿಡದಾರ ॥

ಜಡಗಾನು ಮುಂಬಂದು ಖಡ್ಗವನು ಬಿಸುತ್ತ
ಕಡುಮುನಿದು ನಿಂತು ಹೇಳ್ಯಾನ । ಫೌಜಕ್ಕ
ಬಿಡೆವು ನಿಮ್ಮನ್ನು ನಾವಿಂದು ॥

ನಿಮ್ಮ ಹೆಂಡಿರ ತಾಳಿ ಗಮ್ಮನೆ ಕಳಿಚೆಟ್ಟು
ಸುಮ್ಮನೆ ತಿರುಗಿ ಹೋಗಿರೊ ।
ನೆಮ್ಮದಿಯ ತಂದು ಬದುಕಿರೋ ॥

ಆಂಗ್ಲರ ಸೈನ್ಯವು ಜಂಗಮಾಡಲು ಎಂದು
ಹಂಗ್ಹರಿದು ಮುಂದೆ ಬಂದಿತ್ತ । ಬಿಸಿಲಿನಲಿ
ಕಂಗಳಲಿ ಕೆಂಡ ತುಂಬಿತ್ತ ॥

ಬಂಡೆದ್ದು ಪೋಲಿಸರು ಕಂಡಂಗ ಕೂಗುತ್ತ
ಗುಂಡ ಬಲು ಜೋರ ಹಾರಿಸ್ಯಾರ । ಮುನ್ನುಗ್ಗಿ
ತಂಡ ಎದುರಿಸಿ ಕುಣಿದಾರ ॥

ಪೋಲಿಸರ ಗುಂಡಿಗಿ ಹೆದರದೆ ಜಡಗಾನು
ಡಾಲ ಮುನ್ನೊಡ್ಡಿ ಹಿಡದಾನ । ಬಲುಕೆರಳಿ
ಕಾಲನ ತೆರದಿ ನಿಂತಾನ ॥

ಜಡಗಾನು ಜಿಗಿಜಿಗಿದು ಅಡಿಗಡಿಗೆ ಮುನ್ನುಗ್ಗಿ
ಕಡಿದಾನ ಕುದುರೆ ಕಾಲನ್ನು । ಪೋಲಿಸರ
ಮುಡಿಯನ್ನು ಕಡಿದು ಹಾಕ್ಯಾನ ॥

ಇಪ್ಪತ್ತು ಕುದುರೆಗಳ ಹತ್ತೊಂಬತ್ತು ಸೈನಿಕರ
ತಪ್ಪದೆ ರುಂಡ ತಗಿದಾರ । ಜೋಡಾಗಿ
ಗಪ್ಪನೆ ಮುಂದ ನುಗ್ಗ್ಯಾರ ॥

ಎಲ್ಲರೂ ಮಡಿದ್ಹೋಗಿ ಒಬ್ಬನು ಉಳಿದಿದ್ದ
ತಬ್ಬಿಬ್ಬನಾಗಿ ನಿಂತಿದ್ದ । ಕೈಯೆತ್ತಿ
ಇಬ್ಬರಿಗೂ ಶರಣ ಹೊಡೆದಿದ್ದ ॥

ನಿಮ್ಮೊಳಗ ಶೂರರು ಇನ್ನಾರು ಇರುವರು
ನಿಮ್ಮಂಥ ಬಂಟರು ಇನ್ನೆಲ್ಲಿ । ಎನ್ನುತ್ತ
ಸುಮ್ಮ ಕೈ ಮುಗಿದು ನಿಂತಿದ್ದ ॥

ನಮ್ಮೂರ ತುಂಬೆಲ್ಲ ನಮಗಿಂತ ಶೂರರು
ಒಮ್ಮನದಿ ಕೂಡಿ ಇದ್ದಾರ । ಒಂದಿನ
ನಿಮ್ಮನ್ನು ಗೆದ್ದು ಆಳತಾರ ॥

ಕಲಾದಗಿ ಊರಿಂದ ಸಲೆಗೂಡಿ ಬಂದಿದ್ದ
ಹಲಗಲಿಯ ಮುಂದ ನಿಂತಿದ್ದ । ಫೌಜವು
ಉಲುವಿಲ್ದೆ ತಿರುಗಿ ಓಡಿತ್ತ ॥

ಹೊಸಸೈನ್ಯ ಮತ್ತೊಮ್ಮೆ ಮಸಲತ್ತ ಮಾಡಿತ್ತ
ನಸುನಗೆಯ ಬೀರಿ ಬಂದಿತ್ತ । ಹಲಗಲಿಗೆ
ಹೊಸದಾಗಿ ಸ್ನೇಹ ಮಾಡಿತ್ತ ॥

ಕರಿಯಪ್ಪನ ಗುಡಿಯಲ್ಲಿ ಹಿರಿದಾದ ಗವಿಯಲ್ಲಿ
ಭರಪೂರ ಮದ್ದ ತುಂಬಿತ್ತ । ಒಳಗಡೆ
ಸರಿಯಾಗಿ ಶಸ್ತ್ರ ಒಟ್ಟಿತ್ತ ॥



ಸಿಂದಿ ಸೆರೆಯನು ತಂದು ದುಂದ ಕುರಿಗಳ ಕೊಯ್ದು
ಕಂಡಂಗ ತಿನಿಸಿ ಕುಡಸ್ಯಾರ । ಬೇಡರಿಗೆ
ನಿಂತು ಪೋಲಿಸರು ನೋಡ್ಯಾರ ॥

ಸದ್ದಿಲ್ದೆ ಒಳಹೊಕ್ಕು ಮದ್ದಿಗೆ ನೀರ್ಹೊಡೆದು
ಇದ್ದ ಶಸ್ತ್ರಗಳ ಪಡಕೊಂಡು । ಪೋಲಿಸರು
ಜಿದ್ದ ಬಿದ್ದಂಗ ನಿಂತಾರ ॥

ಅವರಿವರ ಮಧ್ಯದಲಿ ಘನಗೋರ ಕದನಾಗಿ
ಹೆಣಗಳ ರಾಶಿ ಬಿದ್ಹೋಯ್ತು । ಬೇಡರ
ಹೆಣ್ಣುಗಳ ಸಿರಿಯು ಅಳಿದ್ಹೋಯ್ತು ॥

ಬಾಲಾ ಜಡಗಾ ಇವರು ಮೇಳಾಗಿ ಮುಂದಾಗಿ
ಡಾಲ ಖಡ್ಗವ ಹಿಡಿಕೊಂಡು । ವೈರಿಗಳ
ಕಾಲ ತಲೆಗಳನ ಕಡಿದಾರ ॥

ಭಾಲೆ ಬರ್ಚಿಯ ಹಿಡಿದು ಕೋಲು ಬಡಿಗೆಯನೆತ್ತಿ
ಶೂಲಿಯ ತೆರದಿ ಕುಣಿದಾಡಿ । ರೋಷದಿ
ಬಾಲಾಕದನವ ಮಾಡ್ಯಾನ ॥

ಗುಂಡುಗಳು ತಾಗಿದರೂ ಗುಂಡಿಗಿ ಹೆದರದೆ
ಗಂಡುಗಲಿ ಬಾಲಾ ಮುನ್ನುಗ್ಗಿ । ವೈರಿಗಳ
ರುಂಡ ಚೆಂಡಾಡಿ ನಿಂತಾನ ॥

ಜಡಗಾನ ಕೈಯಾನ ಖಡ್ಗವು ಜಿಗಿದ್ಹೋಗಿ
ಜಡಗಾ ಗುಂಡಿಗಿ ಗುರಿಯಾಗಿ । ಉರುಳ್ಯಾನ
ಮಡಿದು ಭೂಮಿಗಿ ಉರುಳ್ಯಾನ ॥

ಗುಂಡುಗುಂಡಿನ ಮ್ಯಾಲ ಗುಂಡುಗಳು ತಾಗಿರಲು
ಗಂಡುಗಲಿ ಬಾಲಾ ಉರುಳ್ಯಾನ । ನೆಲಕೊರಗಿ
ಉಂಡನೆಲ ಋಣವ ತೀರ್ಸ್ಯಾನ ॥

ಜಡಗಾ ಬಾಲಾ ಇವರು ಪೊಡವಿಯಲಿ ಒರಗಿರಲು
ಒಡನೆ ಫೌಜೆಲ್ಲ ತಿರುಗಿತ್ತ । ಆ ಕಡೆಗೆ
ಕಡುನಲಿದು ದಾರಿ ತುಳಿದಿತ್ತ ॥

ತಪ್ಪಸಿ ಇಬ್ಬರು ತಿಪ್ಯಾಗ ಮರಿಯಾಗಿ
ಚಿಪ್ಪಾಟಿ ಮ್ಯಾಲ ಹಾಕೊಂಡು । ನಿಶದಾಗ
ಗಪಿರದೆ ಏನೊ ನುಡಿದಾರ ॥

ಸೊಲ್ಲವನು ಕೇಳುತ್ತ ಎಲ್ಲೆಡೆಗೆ ನೋಡುತ್ತ
ಇಲ್ಲಿ ಬೇಡರು ಎನ್ನುತ್ತ । ಪೋಲಿಸರು
ಸೊಲ್ಲಿಲ್ದೆ ಗುಂಡ ಹಾಕ್ಯಾರ ॥

ಬಸವಳಿದು ಬೇಡರು ಮಿಸಗೂತ ನೆಲಕಪ್ಪಿ
ಕಸವಿಸಿಗೊಳ್ಳುತ್ತ ಕೂಗುತ್ತ । ಬಹುಬೇಗ
ಅಸುನೀಗಿ ಶಿವನ ಕೂಡ್ಯಾರ ॥

ಜಡಗಾಬಾಲಾರು ಮಡಿದು ಹೋದರು ಎಂದು
ಮಡದಿಯರು ಮಣ್ಣ ತೂರ್ಯಾರ । ಬೋರಾಡಿ
ಎಡೆಯಲ್ಲಿ ಇನ್ನು ಅಂದಾರ ॥

ಊರಿನ ಕಣ್ಣುಗಳು ದೂರಾದವು ಎಂದು
ಊರೆಲ್ಲ ಮರುಗಿ ಅತ್ತಿತ್ತ । ಇನ್ನಾರು
ಊರ ರಕ್ಷಕರು ಅಂದಿತ್ತ ॥



ಕಾಡಕೆಸರಿಯಂಥ ಬೇಡರು ಅಸುನೀಗಿ
ಕೂಡಿರಲು ಶಿವನ ಮೌನ್ಯಾಗಿ । ಇದಕಂಡು
ಮೋಡ ಕಣ್ಣೀರ ಹಾಕಿತ್ತು ॥

ಸತ್ತವರ ಹೆಣ್ಣುಗಳು ಅತ್ತತ್ತು ಬಳೆಯೊಡೆದು
ಮುತ್ತೈದೆತನವು ಹೋಯ್ತೆಂದು । ಅರಿವಿಲ್ದೆ
ಸತ್ತಂಗ ನೆಲಕ ಉರುಳ್ಯಾರ ॥

ಇವರಂಥ ಶೂರರು ಭುವನದೊಳು ಇಲ್ಲೆಂದು
ಜವನಾಳು ಇವರು ತಮಗೆಂದು । ಆಂಗ್ಲರು
ಶಿವಶಿವ ಎಂದು ನಡುಗ್ಯಾರ ॥

ಹುಲಿಯಂಗ ಶೂರರು ಹಲಗಲಿಯ ಬೇಡರು
ಕಲಿಯಾಗಿ ರಣದಿ ಮಡಿದವರು । ತ್ಯಾಗಕ್ಕೆ
ಇಳೆಯೊಳು ಹೆಸರ ಪಡೆದವರು ॥

ಜಡಗಾ ಬಾಲಾರಂಗ ಹುಡುಗರು ಹುಟ್ಟಿರಲಿ
ಮೃಡನ ಭಕ್ತರು ಆಗಿರಲಿ । ನಾಡಿನಲಿ
ತುಡುಗರನ ಸೀಳಿ ಒಗೆದಿರಲಿ ॥

ಬೇಡರಂಥ ಸಂತಾನ ನಾಡಿನಲಿ ಹುಟ್ಟಿರಲಿ
ಕಾಡಸಿಂಹಾಗಿ ಬೆಳೆದಿರಲಿ । ದುಷ್ಟರನ
ಪಾಡಾಗಿ ಮೆಟ್ಟಿ ತುಳಿದಿರಲಿ ॥

ರಚನೆ : **ಆರ್. ಸಿ. ಮುದ್ದೇಬಿಹಾಳ**
ವಿಜಯಪುರ

❑

## ಅನುಬಂಧ – ೩

## ಆಕರ ಗ್ರಂಥಗಳು


೧. ಬಾಗಲಕೋಟೆ ಜಿಲ್ಲೆ ಗ್ರಾಮ ಚರಿತ್ರೆ ಕೋಶ (೨೦೧೫)
ಸಂ. ಶಿವಾನಂದ ಶೆಲ್ಲಿಕೇರಿ

೨. ಹಲಗಲಿ : ಗ್ರಾಮ ಜಾನಪದ (೨೦೧೧)
ಡಾ. ಶ್ರೀರಾಮ ಇಟ್ಟಣ್ಣವರ

೩. ಸ್ವಾತಂತ್ರ್ಯ ಸಂಗ್ರಾಮಕ್ಕೆ ಹಲಗಲಿ ಬೇಡರ ಕೊಡುಗೆ (೨೦೧೧)
ವೀರೇಂದ್ರ ಶೀಲವಂತ

೪. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು (೧೯೭೨)
ಸಂ. ಕ್ಯಾತನಹಳ್ಳಿ ರಾಮಣ್ಣ

೫. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ (೨೦೦೯)
ಸಂ. ಪ್ರೊ. ಮಂಜುನಾಥ ಬೇವಿನಕಟ್ಟಿ


**ಲೇಖನಗಳು:**


೧. ಬಾಗಲಕೋಟ ಜಿಲ್ಲೆ: ಸ್ವಾತಂತ್ರ್ಯ ಹೋರಾಟ–ಬೇಡನಾಯಕರು
ಲೇ. ಡಾ. ಗಾಂಧೀಜಿ ಚಂದ್ರಪ್ಪ
ಆಕರ : ಬಾಗಲಕೋಟ ಜಿಲ್ಲಾ ಸಂಸ್ಕೃತಿ (೨೦೧೪)
ಪ್ರ.ಸಂ. ಡಾ. ವಿಜಯಕುಮಾರ ಕಟಗಿಹಳ್ಳಿಮಠ

೨. ಬ್ರಿಟಿಷರ ವಿರುದ್ಧ ಬಾಗಲಕೋಟೆ ಜಿಲ್ಲೆಯಲ್ಲಿ
ಬಂಡಾಯಗಳು. ಲೇ. ಮುತ್ತು ನಾಯ್ಕರ್
ಆಕರ : ದಕ್ಷಿಣಾ ಪಥೇಶ್ವರ (೨೦೦೨)
ಪ್ರ. ಸಂ. ಎಚ್. ಎನ್. ಸಿದ್ದಣ್ಣ


❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |